ವಿಜಯಪುರ | ಸಂಪುಟ 04 | ಸಂಚಿಕೆ 230 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ನವೆಂಬರ್ 06, 2026



"ಕಾಂಗ್ರೆಸ್‌ನಿಂದಲೇ ತನ್ನದೇ ಮುಖ್ಯಮಂತ್ರಿಯ ವಿರುದ್ಧ ಅವಿಶ್ವಾಸ, ಆಡಳಿತಾರೂಢ ಸರ್ಕಾರವು ತನ್ನದೇ ನಾಯಕರ ವಿಶ್ವಾಸವನ್ನು ಕಳೆದುಕೊಂಡಾಗ, ಅದು ಕರ್ನಾಟಕವನ್ನು ಆಳುವ ಹಕ್ಕನ್ನೇ ಕಳೆದುಕೊಳ್ಳುತ್ತದೆ. ಸರ್ಕಾರದ ವಿರುದ್ಧದ ಅತ್ಯಂತ ಗಂಭೀರವಾದ ಟೀಕೆ ಬರುತ್ತಿರುವುದು ಕಾಂಗ್ರೆಸ್ ಪಕ್ಷದ ಒಳಗಿನಿಂದಲೇ."

■ ಆರ್. ಅಶೋಕ್
ಬಿಜೆಪಿ & ವಿಪಕ್ಷ ನಾಯಕ

ಸ್ಲಂ ಬೋರ್ಡ್ ಮನೆ ನಿರ್ಮಾಣ ಕಾಮಗಾರಿ ಸ್ಥಗಿತಕ್ಕೆ ಪ್ರತಿಭಟನೆ



■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಪಟ್ಟಣದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ (ಸ್ಲಂ ಬೋರ್ಡ್) ವತಿಯಿಂದ ಕೈಗೆತ್ತಿಕೊಂಡಿರುವ ವಸತಿ ಯೋಜನೆಯ ಕಾಮಗಾರಿಗಳು ಸುಮಾರು ನಾಲ್ಕು ವರ್ಷ ಕಳೆದರೂ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಬಡ ಫಲಾನುಭವಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಮನೆ ನಿರ್ಮಾಣ ಕಾಮಗಾರಿಯನ್ನು ತಕ್ಷಣ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಬೇಕು ಹಾಗೂ ಕಾಮಗಾರಿ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಂಬೇಡ್ಕರ್ ಸೇನೆ ಹಾಗೂ ಡಿಎಸ್‌ಎಸ್ ಚಂದ್ರಕಾಂತ್ ಕಾದ್ರೊಳ್ಳಿ ಬಣದ ವತಿಯಿಂದ ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಅಂಬೇಡ್ಕರ್ ಸೇನೆಯ ವಿಜಯಪುರ ಜಿಲ್ಲಾ ಉಪಾಧ್ಯಕ್ಷ ಬಸು ಈ. ಕಟ್ಟಿಮನಿ(ಮಾದರ) ಮಾತನಾಡಿ, ಸ್ಲಂ ಬೋರ್ಡ್ ವತಿಯಿಂದ ಬಡ ಕುಟುಂಬಗಳಿಗಾಗಿ ಕೈಗೆತ್ತಿಕೊಂಡಿರುವ ವಸತಿ ಯೋಜನೆ ನಾಲ್ಕು ವರ್ಷ ಕಳೆದರೂ ಪೂರ್ಣಗೊಂಡಿಲ್ಲ. ಸರ್ಕಾರದಿಂದ ಅನುದಾನ ಮಂಜೂರಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿದೆ. ಸ್ವಂತ ಮನೆಯ ಕನಸು ಕಂಡಿದ್ದ ಬಡ ದಲಿತ ಕುಟುಂಬಗಳು ಇಂದಿಗೂ ಬಾಡಿಗೆ ಮನೆಗಳಲ್ಲಿ ಅಥವಾ ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಮಗಾರಿ ವಿಳಂಬಕ್ಕೆ ಕಾರಣ–ರಾದ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು. ಫಲಾನುಭವಿಗಳಿಗೆ ಗುಣಮಟ್ಟದ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸುವವರೆಗೂ ನಮ್ಮ ಸಂಘಟನೆಯ ಹೋರಾಟ ನಿರಂತರವಾಗಿ ನಡೆಯಲಿದೆ ಎಂದು ಎಚ್ಚರಿಸಿದರು.

ಗುತ್ತಿಗೆದಾರರನ್ನು ಅಂಬೇಡ್ಕರ್ ಸೇನೆಯ ತಾಳಿಕೋಟೆ ತಾಲೂಕು ಅಧ್ಯಕ್ಷ ಗೋಪಾಲ ಕಟ್ಟಿಮನಿ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ಸ್ಲಂ ಬೋರ್ಡ್ ವಿಜಯಪುರ ಜಿಲ್ಲಾ ಕಚೇರಿಗೆ ಹಲವು ಬಾರಿ ಮೌಖಿಕವಾಗಿ ಹಾಗೂ ಲಿಖಿತವಾಗಿ ಮನವಿ ಸಲ್ಲಿಸಿದರೂ ವಸತಿ ಯೋಜನೆ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ. ಬಡ ಫಲಾನುಭವಿಗಳ ಮನೆ ನಿರ್ಮಾಣದ ವಿಚಾರದಲ್ಲಿ ಇಷ್ಟೊಂದು ನಿರ್ಲಕ್ಷ್ಯ ತೋರುವುದು ಸರಿಯಲ್ಲ ಎಂದರು. ಡಿಎಸ್‌ಎಸ್ ಚಂದ್ರಕಾಂತ್ ಕಾದ್ರೊಳ್ಳಿ ಬಣದ ತಾಳಿಕೋಟೆ ತಾಲೂಕು ಕಾರ್ಯದರ್ಶಿ ಶಂಕರ್ ಸಾಸನೂರ ಮಾತನಾಡಿ,

ಅಧಿಕಾರಿಗಳ ಭರವಸೆ ಹಿನ್ನೆಲೆ ಪ್ರತಿಭಟನೆ ಹಿಂದಕ್ಕೆ

ಪ್ರತಿಭಟನೆ ಆರಂಭವಾದ ಬಳಿಕ ಕಂದಾಯ ಅಧಿಕಾರಿಗಳಾದ ಮುನ್ನಾ ಅತ್ತಾರ ಹಾಗೂ ಮೂಕಿಹಾಳ ಮತ್ತು ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಹೋರಾಟಗಾರರ ಮನವಿ ಆಲಿಸಿದರು. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಲು ಪ್ರಯತ್ನಿಸಿದರು. ಆದರೆ ಸ್ಲಂ ಬೋರ್ಡ್ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸ್ಪಷ್ಟ ಭರವಸೆ ನೀಡುವವರೆಗೂ ಪ್ರತಿಭಟನೆ ಮುಂದುವರಿಸುವುದಾಗಿ ಹೋರಾಟಗಾರರು ಪಟ್ಟು ಹಿಡಿದರು.

ನಂತರ ಸ್ಥಳಕ್ಕೆ ಆಗಮಿಸಿದ ಕಾಮಗಾರಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೋರಾಟಗಾರರೊಂದಿಗೆ ಚರ್ಚಿಸಿ, ಒಂದು ವಾರದೊಳಗೆ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಪುನರಾರಂಭಿಸಲಾಗುವುದು. ಮುಂದಿನ ಮೂರು ತಿಂಗಳೊಳಗೆ ಸಂಪೂರ್ಣ ಕಾಮಗಾರಿ ಮುಗಿಸಿ ಫಲಾನುಭವಿಗಳಿಗೆ ಮನೆಗಳನ್ನು ಹಸ್ತಾಂತರಿಸಲಾಗುವುದು ಎಂದು ಭರವಸೆ ನೀಡಿದರು. ಅಧಿಕಾರಿಗಳ ಭರವಸೆ ಹಿನ್ನೆಲೆ ಸಂಘಟಕರು ಪ್ರತಿಭಟನೆಯಿಂದ ಹಿಂದಕ್ಕೆ ಸರಿದರು. ನಂತರ ತಮ್ಮ ಪ್ರಮುಖ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ತಾಳಿಕೋಟೆ ತಹಶೀಲ್ದಾರರ ಮುಖಾಂತರ ವಿಜಯಪುರ ಜಿಲ್ಲಾಧಿಕಾರಿಗಳು ಹಾಗೂ ಸ್ಲಂ ಬೋರ್ಡ್ನ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಮಾದಿಗ ದಂಡೋರ ಬೆಳಗಾವಿ ವಿಭಾಗದ ಸಂಚಾಲಕ ರಮೇಶ್ ಪಿ. ಮಾದರ್, ಅಂಬೇಡ್ಕರ್ ಸೇನೆಯ ಕಾರ್ಯದರ್ಶಿ ಮಹಾದೇವ ಅಸ್ಕಿ, ಖಜಾಂಚಿ ಪರಶುರಾಮ ತಳವಾರ, ನಗರ ಘಟಕದ ಅಧ್ಯಕ್ಷ ನಾಗರಾಜ ಗಜಕೋಶ, ಕಾರ್ಮಿಕ ಘಟಕದ ಅಧ್ಯಕ್ಷ ಪರಶುರಾಮ ನಾಲತವಾಡ, ಬಸವರಾಜ ಸಾಸನೂರ, ಶಾಂತಪ್ಪ ಮಾನೇಕಾರ, ಸಂತೋಷ್ ಹಗರಗುಂಡ, ಹಿರಿಯರಾದ ಮಲ್ಲಪ್ಪ ಶಿರೋಳ್ ಹಾಗೂ ವಸತಿ ಯೋಜನೆಯ ಫಲಾನುಭವಿಗಳಾದ ನಾಗಪ್ಪ ಕಟ್ಟಿಮನಿ, ಪರಶುರಾಮ ಕಟ್ಟಿಮನಿ, ದೇವರಾಜ್ ಕಟ್ಟಿಮನಿ, ಗಿರೀಶ್ ಕಟ್ಟಿಮನಿ ಸೇರಿದಂತೆ ಅಂಬೇಡ್ಕರ್ ಸೇನೆ ಹಾಗೂ ಡಿಎಸ್‌ಎಸ್ ಸಂಘಟನೆಯ ಮುಖಂಡರು, ಕಾರ್ಯಕರ್ತರು ಮತ್ತು ಫಲಾನುಭವಿಗಳು ಉಪಸ್ಥಿತರಿದ್ದರು.

ಬೆಂಗಳೂರು ಟರ್ಫ್ ಕ್ಲಬ್‌ಗೆ 4 ಎಕರೆ ಜಮೀನು ಗುತ್ತಿಗೆ । ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು, ಸೇತುವೆಗಳು ಮತ್ತು ಇತರ ಮೂಲಸೌಕರ್ಯಗಳ ಅಭಿವೃದ್ಧಿಗೆ ನಿರ್ಧಾರ

20 ಸಾವಿರ ಕೋಟಿ ರೂ.ವೆಚ್ಚದ ರಸ್ತೆ ಕಾಮಗಾರಿಗೆ ಸಚಿವ ಸಂಪುಟ ಅಸ್ತು!



ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ಗೆ(BTC) ಸರ್ಕಾರಿ ಜಮೀನನ್ನು ಗುತ್ತಿಗೆ ನೀಡುವ ಸಂಬಂಧ, ಕೇವಲ ನಾಲ್ಕು ಎಕರೆ ಜಮೀನನ್ನು ಮಾತ್ರ 30 ವರ್ಷಗಳ ಅವಧಿಗೆ ನೀಡಲು ರಾಜ್ಯ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ. ಉಳಿದ ಜಮೀನನ್ನು ಸರ್ಕಾರವು ಅಭಿವೃದ್ಧಿ ಕಾರ್ಯಗಳಿಗಾಗಿ ವಾಪಸ್ ಪಡೆಯಲಿದೆ.

ಪ್ರಸ್ತುತ ಇದ್ದ ಗುತ್ತಿಗೆ ಒಪ್ಪಂದದ ಅವಧಿ ಮುಗಿಯುತ್ತಿರುವ ಹಿನ್ನೆಲೆಯಲ್ಲಿ, ಟರ್ಫ್ ಕ್ಲಬ್ 30 ವರ್ಷಗಳ ದೀರ್ಘಾವಧಿಯ ಗುತ್ತಿಗೆಯನ್ನು ಕೋರಿತ್ತು. ಆದರೆ, ಸಂಪೂರ್ಣ ಜಮೀನನ್ನು ಗುತ್ತಿಗೆಗೆ ನೀಡುವ ಬದಲು, ಉಳಿದ ಜಮೀನನ್ನು ಸರ್ಕಾರ ತನ್ನ ಅಭಿವೃದ್ಧಿ ಕಾರ್ಯಗಳಿಗಾಗಿ ಇಟ್ಟುಕೊಳ್ಳಲು ನಿರ್ಧರಿಸಿದೆ.

ಮತ್ತೊಂದು ಪ್ರಮುಖ ನಿರ್ಧಾರದಲ್ಲಿ, ಸಚಿವ ಸಂಪುಟವು ಲೋಕೋಪಯೋಗಿ ಇಲಾಖೆಯ(PWD) ವಿವಿಧ ಯೋಜನೆಗಳ ಅಡಿಯಲ್ಲಿ 20,000 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು, ಸೇತುವೆಗಳು ಮತ್ತು ಕರ್ನಾಟಕದಾದ್ಯಂತ ಇರುವ ಇತರ ಮೂಲಸೌಕರ್ಯಗಳ ಅಭಿವೃದ್ಧಿ ಒಳಗೊಂಡಿದೆ.

ಈ ಯೋಜನೆಗಳಲ್ಲಿ 'ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ'ಯ (State Highway Development Project) 5ನೇ ಹಂತದ (Stage V), 2ನೇ ಘಟ್ಟದ (Phase II) ಅಡಿಯಲ್ಲಿ 1,897 ಕಿ.ಮೀ ರಸ್ತೆಗಳ ಅಭಿವೃದ್ಧಿ ಸೇರಿದೆ.

ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆಗಳು, ಸೇತುವೆಗಳು ಮತ್ತು ಕಟ್ಟಡಗಳ ಅಭಿವೃದ್ಧಿಗಾಗಿ ಹೆಚ್ಚುವರಿಯಾಗಿ 6,000 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಅಲ್ಲದೆ, ಇನ್ನೂ 3,000 ಕೋಟಿ ರೂ.ಗಳನ್ನು ಹೆಚ್ಚುವರಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ವ್ಯಯಿಸಲಾಗುವುದು ಎಂದರು.

ಜಿಲ್ಲಾ ಕೇಂದ್ರಗಳು, ತಾಲೂಕು ಕೇಂದ್ರಗಳು ಮತ್ತು ನೆರೆಯ ತಾಲೂಕುಗಳನ್ನು ಸಂಪರ್ಕಿಸುವ ಸುಮಾರು 3,986 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿಪಡಿಸಲು 6,000 ಕೋಟಿ ರೂ. ವೆಚ್ಚದ ಹೊಸ ಕಾರ್ಯಕ್ರಮಕ್ಕೂ ಸಚಿವ ಸಂಪುಟ ಅನುಮೋದನೆ ನೀಡಿದೆ. ಇದರ ಜೊತೆಗೆ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (KRDCL) ಮೂಲಕ ಬೆಂಗಳೂರಿನ ಸುತ್ತಮುತ್ತ 10 ಪ್ಯಾಕೇಜ್‌ಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, 3,409.02 ಕೋಟಿ ರೂಪಾಯಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.


ಈ ಯೋಜನೆಯು ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ, ಅಲ್ಲಿನ ರಸ್ತೆ ಜಾಲವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.

ಸಚಿವ ಸಂಪುಟದ ಇತರ ಪ್ರಮುಖ ನಿರ್ಧಾರಗಳು

ಇತರ ಪ್ರಮುಖ ನಿರ್ಧಾರಗಳ ಪೈಕಿ, ಶಿವಮೊಗ್ಗದಲ್ಲಿ ಹಳೆಯ ತುಂಗಾ ಸೇತುವೆಯನ್ನು 40 ಕೋಟಿ ರೂಪಾಯಿ ವೆಚ್ಚದಲ್ಲಿ ಪುನರ್ನಿರ್ಮಾಣ. ಭದ್ರಾವತಿಯಲ್ಲಿ ಸಿದ್ದಾರೂಢ ನಗರವನ್ನು ಕೆಎಸ್‌ಆರ್‌ಟಿಸಿ (ಏಖ–ಖಿಆಅ) ಬಸ್ ನಿಲ್ದಾಣದೊಂದಿಗೆ ಸಂಪರ್ಕಿಸುವ ಹೊಸ ಸೇತುವೆಯನ್ನು 42 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಸಂಪುಟ ಒಪ್ಪಿಗೆ ಕಲಬುರಗಿ ಜಿಲ್ಲೆಯ ಕಣ್ಣೂರಿನ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಸೇತುವೆ ಮತ್ತು ಎತ್ತರಿಸಿದ ಸಂಪರ್ಕ ರಸ್ತೆಯನ್ನು 21 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.ಬರಗಾಲದ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಅಗತ್ಯವನ್ನು ಪರಿಗಣಿಸಿ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಧರ್ಮಪುರಿಯಲ್ಲಿರುವ ಹಲವಾರು ಕೆರೆಗಳನ್ನು ತುಂಬಿಸಲು 35 ಕೋಟಿ ರೂಪಾಯಿ ವೆಚ್ಚದ ಏತ ನೀರಾವರಿ ಯೋಜನೆಗೂ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಚಳ್ಳಕೆರೆಯಲ್ಲಿ 35.04 ಕೋಟಿ ರೂಪಾಯಿ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಹಾಗೂ ಹಾಸನ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಹೆಚ್ಚುವರಿ ನ್ಯಾಯಾಲಯ ಮತ್ತು ಕೌಟುಂಬಿಕ ನ್ಯಾಯಾಲಯದ ಕಟ್ಟಡಗಳ ನಿರ್ಮಾಣಕ್ಕಾಗಿ 12.40 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲು ಸಂಪುಟ ಅನುಮೋದನೆ ನೀಡಿದೆ.

ರಾಜ್ಯ ವಿಧಾನಮಂಡಲದ ಚಳಿಗಾಲದ ಅಧಿವೇಶನವು ಡಿಸೆಂಬರ್ 2 ರಿಂದ 11 ರವರೆಗೆ ನಡೆಸಲು ನಿರ್ಧಾರ ಸನ್ನತಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2026ಕ್ಕೆ ಸಚಿವ ಸಂಪುಟದ ಅನುಮೋದನೆಮಲ್ಪೆ ಮೀನುಗಾರಿಕಾ ಬಂದರು: ಪಿಪಿಪಿ–ಡಿಬಿಎಫ್‌ಒಟಿ (PPP-DBFOT) ಮಾದರಿಯಡಿ, 1,800 ಚದರ ಮೀಟರ್ ವಿಸ್ತೀರ್ಣದಲ್ಲಿ ಬಹು–ಹಂತದ (multi-level) ಪಾರ್ಕಿಂಗ್ ಸೌಲಭ್ಯ ನಿರ್ಮಿಸಲು ಅನುಮೋದನೆ.

ನಾಲ್ಕು ಎಕರೆ ಜಮೀನು ಗುತ್ತಿಗೆಗೆ ನೀಡಲು ನಿರ್ಧಾರ



ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್(RDPR) ಸಚಿವ ಈಶ್ವರ್ ಖಂಡ್ರೆ ಅವರು, ಸರ್ಕಾರವು ಕೇವಲ ನಾಲ್ಕು ಎಕರೆ ಜಮೀನನ್ನು ಮಾತ್ರ ಗುತ್ತಿಗೆಗೆ ನೀಡಲು ನಿರ್ಧರಿಸಿದ್ದು, ಉಳಿದ ಜಮೀನನ್ನು ವಾಪಸ್ ಪಡೆದು ಸರ್ಕಾರವೇ ಅಭಿವೃದ್ಧಿಪಡಿಸಲಿದೆ ಎಂದು ತಿಳಿಸಿದರು.

ಟರ್ಫ್ ಕ್ಲಬ್ ಅನ್ನು ಕುಣಿಗಲ್‌ಗೆ ಸ್ಥಳಾಂತರಿಸುವ ವಿಷಯದ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಕ್ಲಬ್ ಸ್ಥಳಾಂತರಕ್ಕೆ ಹೆಚ್ಚಿನ ಸಮಯ ಕೋರಿದ್ದು, ಈ ಕುರಿತು ಸರ್ಕಾರವು ವಿಸ್ತೃತ ವರದಿಯನ್ನು ಪಡೆಯಲಿದೆ ಎಂದು ಸಚಿವರು ಹೇಳಿದರು.

ಇಂಡಿ ಸ್ವಚ್ಛತೆ, ನೈರ್ಮಲ್ಯಕ್ಕೆ ಆಧುನಿಕ ತಂತ್ರಜ್ಞಾನದ ಬಲ

ಒಳಚರಂಡಿ ನಿರ್ವಹಣೆಗೆ ಹೈಟೆಕ್ ಸ್ಪರ್ಶ । ನೂತನ ವಾಹನಕ್ಕೆ ಶಾಸಕ ಯಶವಂತರಾಯಗೌಡ ಪಾಟೀಲ ಚಾಲನೆ । ರೂ. 40 ಲಕ್ಷ ವೆಚ್ಚದಲ್ಲಿ ಖರೀದಿ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ನಗರದ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವ ಉದ್ದೇಶದಿಂದ ಇಂಡಿ ನಗರಸಭೆಯ ವತಿಯಿಂದ ಸುಮಾರು ರೂ. 40 ಲಕ್ಷ ವೆಚ್ಚದಲ್ಲಿ ಖರೀದಿಸಲಾದ ಒಳಚರಂಡಿ ಸ್ವಚ್ಛಗೊಳಿಸುವ ನೂತನ ಯಂತ್ರ ಅಳವಡಿತ ವಾಹನಕ್ಕೆ ಶಾಸಕ ಯಶವಂತರಾಯಗೌಡ ಪಾಟೀಲ ಚಾಲನೆ ನೀಡಿದರು.

ನಗರದ ಒಳಚರಂಡಿ ವ್ಯವಸ್ಥೆಯ ಸಮರ್ಪಕ ನಿರ್ವಹಣೆ, ಸ್ವಚ್ಛತಾ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳುವುದು ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸುವಲ್ಲಿ ಈ ನೂತನ ವಾಹನ ಮಹತ್ವದ ಪಾತ್ರ ವಹಿಸಲಿದೆ.

ಇಂಡಿ ನಗರ ಆಡಳಿತಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರ ಮುಂದಾಲೋಚನೆಯ ಫಲವಾಗಿ ನಗರದ ಸ್ವಚ್ಛತೆ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ನಗರಸಭೆ ಆಧುನಿಕ ಯಂತ್ರೋಪಕರಣಗಳ ಬಳಕೆಗೆ ಮುಂದಾಗಿದೆ. ನೂತನ ಯಂತ್ರದ ಬಳಕೆಯಿಂದ ಒಳಚರಂಡಿಗಳಲ್ಲಿನ ತ್ಯಾಜ್ಯ ಹಾಗೂ ಕೊಳಚೆ ತೆರವು ಕಾರ್ಯ ಸುಗಮವಾಗುವುದರ ಜತೆಗೆ ಸ್ವಚ್ಛತಾ ಸಿಬ್ಬಂದಿಯ ಕೆಲಸದ ಒತ್ತಡವೂ ಕಡಿಮೆಯಾಗಲಿದೆ.ತುರ್ತುಸಂದರ್ಭಗಳಲ್ಲಿ ತ್ವರಿತವಾಗಿ ಕಾರ್ಯಾಚರಣೆ ಕೈಗೊಳ್ಳಲು ಅನುಕೂಲವಾಗಲಿದೆ. ನಗರದ ಸ್ವಚ್ಛತೆ, ನೈರ್ಮಲ್ಯ ಹಾಗೂ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆಧುನಿಕ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಒಳಚರಂಡಿ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡುವ ಈ ಕ್ರಮ ನಗರಕ್ಕೆ ಉಪಯುಕ್ತವಾಗಲಿದೆ. ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಶಿವಾನಂದ ಪೂಜಾರಿ, ನಗರಸಭೆ ಸಿಬ್ಬಂದಿ ಹಾಗೂ ಇತರರು ಉಪಸ್ಥಿತರಿದ್ದರು.



ಕೃಷಿ ಸಂಸ್ಕೃತಿ ಪುನಶ್ಚೇತನಕ್ಕೆ ಬಜೆಟ್‌ನ ಶೇ.10 ಮೀಸಲಿಡಿ

ಕೃಷಿ ಸಂಸ್ಕೃತಿ ಉಳಿವಿಗೆ ರೈತರ ರಣಕಹಳೆ । ಚಡಚಣದಲ್ಲಿ ಜೋಡೆತ್ತಿನ ಬಂಡಿಗಳ ಶಕ್ತಿ ಪ್ರದರ್ಶನ । ಹಕ್ಕೊತ್ತಾಯ ಪತ್ರ ಸಲ್ಲಿಕೆ । ರೈತರ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಕೃಷಿ ಸಂಸ್ಕೃತಿಯ ಉಳಿವು ಹಾಗೂ ಜೋಡೆತ್ತಿನ ಕೃಷಿ ಪದ್ಧತಿಯ ಪುನಶ್ಚೇತನಕ್ಕಾಗಿ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಶೇ.10ರಷ್ಟು ಅನುದಾನ ಮೀಸಲಿಡಬೇಕು. ಜೋಡೆತ್ತಿನ ಕೃಷಿ ಮಾಡುವ ರೈತರಿಗೆ ಪ್ರತಿ ತಿಂಗಳು ರೂ. 11 ಸಾವಿರ ಪ್ರೋತ್ಸಾಹಧನ ನೀಡಬೇಕು ಎಂದು ಆಗ್ರಹಿಸಿ ತಾಲೂಕಿನ ರೈತರು ಗುರುವಾರ 60ಕ್ಕೂ ಹೆಚ್ಚು ಜೋಡೆತ್ತಿನ ಬಂಡಿಗಳೊಂದಿಗೆ ಚಡಚಣ ಪಟ್ಟಣದಲ್ಲಿ ಮೆರವಣಿಗೆ ನಡೆಸಿ ಸರ್ಕಾರಕ್ಕೆ ಹಕ್ಕೊತ್ತಾಯ ಸಲ್ಲಿಸಿದರು.

ತಾಲೂಕಿನ ಜೋಡೆತ್ತಿನ ರೈತರು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರು ಸೇರಿದಂತೆ 60ಕ್ಕೂ ಹೆಚ್ಚು ಜೋಡೆತ್ತಿನ ಬಂಡಿಗಳೊಂದಿಗೆ ಪಟ್ಟಣದ ಕೆಇಬಿ ಕಚೇರಿಯಿಂದ ಶ್ರೀ ಬಸವೇಶ್ವರ ವೃತ್ತದ ಮಾರ್ಗವಾಗಿ ತಹಶೀಲ್ದಾರ್ ಕಚೇರಿವರೆಗೆ ಮೆರವಣಿಗೆ ನಡೆಸಿದರು.

ಸಾಂಕೇತಿಕವಾಗಿ ಶ್ರೀ ಬಸವೇಶ್ವರ ವೃತ್ತದಲ್ಲಿ ರಾಜ್ಯ ಹೆದ್ದಾರಿ ತಡೆದು ಕೆಲಹೊತ್ತು ಧರಣಿ ಸತ್ಯಾಗ್ರಹ ಮಾಡಿದ ಬಳಿಕ ಉಪ ತಹಶೀಲ್ದಾರ್ ಕೆ.ವೈ. ಹೊಸಮನಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಹಕ್ಕೊತ್ತಾಯ ಪತ್ರ ಸಲ್ಲಿಸಿದರು.

ಜ್ಞಾನಯೋಗಿ ಪೂಜ್ಯ ಸಿದ್ದೇಶ್ವರ ಸ್ವಾಮೀಜಿಯವರ ಪ್ರೇರಣೆಯಿಂದ ಕೃಷಿ ಪದವೀಧರರು ಆರಂಭಿಸಿರುವ ನಂದಿ ಕೃಷಿ ಸಂಸ್ಕೃತಿ ಪುನಶ್ಚೇತನ ಅಭಿಯಾನದ ಅಂಗವಾಗಿ ಈ ಹೋರಾಟ ಹಮ್ಮಿಕೊಳ್ಳಲಾಗಿ–ತ್ತು. ಕೃಷಿ ಸಂಸ್ಕೃತಿಯನ್ನು ಉಳಿಸುವುದರ ಜೊತೆಗೆ ಬಯಲುಸೀಮೆಯ ಗ್ರಾಮಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

ಹಿರಿಯ ರೈತ ಮುಖಂಡ ನಂದಿ ಸೇನೆ ವಿಜಯಪುರ ಜಿಲ್ಲಾಧ್ಯಕ್ಷ ಬಸವರಾಜ ಬಿರಾದಾರ ಮಾತನಾಡಿ, ಕೃಷಿ ಮತ್ತು ರೈತರ ಬದುಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಜೋಡೆತ್ತಿನ ಕೃಷಿ ಪದ್ಧತಿ ಹಾಗೂ ಗ್ರಾಮೀಣ ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಒಟ್ಟು ಬಜೆಟ್‌ನಲ್ಲಿ ಶೇ.10ರಷ್ಟು ಅನುದಾನವನ್ನು ಕೃಷಿ ಸಂಸ್ಕೃತಿ ಪುನಶ್ಚೇತನಕ್ಕೆ ಮೀಸಲಿಡುವಂತೆ ಕಾನೂನು ರೂಪಿಸಬೇಕು. ಪ್ರತಿಯೊಬ್ಬ ಜೋಡೆತ್ತಿನ ಕೃಷಿಕ–ರಿಗೆ ಮಾಸಿಕ 11 ಸಾವಿರ ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಗೊಳಿಸಬೇಕು ಮತ್ತು ರಾಜ್ಯದ ಒಟ್ಟು ಬಜೆಟ್‌ನ ಶೇ.10ರಷ್ಟು ಅನುದಾನವನ್ನು ನಂದಿ ಕೃಷಿ ಸಂಸ್ಕೃತಿ ಪುನಶ್ಚೇತನಕ್ಕಾಗಿ ಮೀಸಲಿಡುವ ಕಾನೂನನ್ನು ಜ್ಞಾನಯೋಗಿ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಹೆಸರಿನಲ್ಲಿ ಜಾರಿಗೆ ತರಬೇಕು. ಈ ಕಾನೂನು ನಾಡಿನ ಪೂಜ್ಯರ ಮಾರ್ಗದರ್ಶನದಲ್ಲಿ ಅನುಷ್ಠಾನಗೊಳ್ಳಬೇಕು ಎಂಬುದು ಜೋಡೆತ್ತಿನ ರೈತರ ನಂದಿ ಸೇನೆಯ ಪ್ರಮುಖ ಬೇಡಿಕೆಯಾಗಿದೆ. ಕೃಷಿ ಸಂಸ್ಕೃತಿಯ ಸಂರಕ್ಷಣೆ, ಜೋಡೆತ್ತುಗಳ ಸಾಕಾಣಿಕೆ ಹಾಗೂ ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಪುನಶ್ಚೇತನಕ್ಕೆ ಈ ಕಾನೂನು ಶಾಶ್ವತ ಬಲ ನೀಡಬೇಕು ಎಂದು ಒತ್ತಾಯಿಸಿದರು.

ರೈತ ಮುಖಂಡ ಮಹಾದೇವ ಕರ್ಲಮಳ ಮಾತನಾಡಿ, ಜೋಡೆತ್ತಿನ ಕೃಷಿಕರ ಸಂಖ್ಯೆ ಕಡಿಮೆಯಾಗಿ ಈ ಪದ್ಧತಿ ಸಂಪೂರ್ಣ ನಾಶವಾದರೆ ಕೃಷಿ ಕ್ಷೇತ್ರ ಹಾಗೂ ಗ್ರಾಮೀಣ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕಳೆದ ಮೂರು ವರ್ಷಗಳಿಂದ ಜೋಡೆತ್ತುಗಳ ಮಹತ್ವದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ನಂದಿ ಕೃಷಿ ಸಂಸ್ಕೃತಿಯ ಪುನಶ್ಚೇತನಕ್ಕಾಗಿ ಸರ್ಕಾರ ತಕ್ಷಣ ಪ್ರೋತ್ಸಾಹಧನ ಮತ್ತು ವಿಶೇಷ ಅನುದಾನದ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತಸಂಘ ದ ಬೀರಪ್ಪ ಸಲಗರ ಮಾತನಾಡಿದರು.

ಈ ಸಂದರ್ಭದಲ್ಲಿ ಹಾವಿನಾಳ ಚರಮೂರ್ತಿ ಮಠದ ವಿಜಯ ಮಹಾಂತೇಶ ಶಿವಾಚಾರ್ಯರ,ಸ್ಥಳೀಯ ಯೋಗಾಶ್ರಮದ ಯೋಗಾನಂದ ಸ್ವಾಮಿಜಿ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಗೌರವಾಧ್ಯಕ್ಷ ಮುರುಗೇಶ ಸಿಂಪಿ, ಮಹಾದೇವ ಬನಸೋಡೆ, ಮಹಾದೇವ ಹಿರೇಕುರುಬರ, ಸೋಮು ಕಂಬಾರ, ಫೆನೆಪ್ಪ ಬಿರಾದಾರ, ಕಲ್ಲಪ್ಪ ಅರವತ್ತಿ, ಕಾಶಿರಾಯ ಕಾಮಗೊಂಡ, ಲಾಯಪ್ಪ ವಾಘಮೋರೆ, ಮಹಾದೇವ ತೇಲಿ, ಧರೆಪ್ಪ ಬಿರಾದಾರ, ಸೇರಿದಂತೆ ವಿವಿಧ ಗ್ರಾಮಗಳ ರೈತರು ಉಪಸ್ಥಿತರಿದ್ದರು.

ವ್ಯಕ್ತಿ ಮತ್ತು ವ್ಯಕ್ತಿತ್ವ ವಿಕಸನವ್ಯಕ್ತಿತ್ವ ವಿಕಸನ ಹಾಗು ವೃತ್ತಿ ಬೆಳವಣಿಗೆ

■ ಉದಯರಶ್ಮಿ ದಿನಪತ್ರಿಕೆ

ವ್ಯಕ್ತಿತ್ವ ಎಂಬುದು ಅನೇಕ ಆಂತರಿಕ ಶಕ್ತಿಗಳ ಸಂಗಮ. ಆದರ್ಶ, ಸದಾಚಾರ, ಶ್ರದ್ಧೆ, ನಿಷ್ಠೆ, ದಕ್ಷತೆ, ಎಚ್ಚರ ಸನ್ನಿವೇಶಗಳೊಡನೆ ಹೊಂದಿಕೊಳ್ಳುವ ಸಾಮರ್ಥ್ಯ, ವೃತ್ತಿಪರತೆ, ಪರೋಪಕಾರ ಮನಸ್ಸು, ಪ್ರಾಮಾಣಿಕತೆಗಳು ವ್ಯಕ್ತಿತ್ವವನ್ನು ನಿರ್ಮಿಸುವ ಶಕ್ತಿಗಳು. ಇದರಿಂದ ಇಲ್ಲಿ ವ್ಯಕ್ತಿ ಮುಖ್ಯವಲ್ಲ ಬದಲಿಗೆ ವ್ಯಕ್ತಿತ್ವ ಮುಖ್ಯವೆಂಬುದು ಅರಿವಾಗುತ್ತದೆ. ಹೂವಿಗೆ ಪರಿಮಳ ಎಷ್ಟು ಮುಖ್ಯವೋ ಅದೇ ರೀತಿ ಮನುಷ್ಯನಿಗೆ ವ್ಯಕ್ತಿತ್ವವೂ ಮುಖ್ಯ. ಪ್ರತಿಯೊಬ್ಬರ ಜೀವನದ ಒಳಿತು ಕೆಡಕುಗಳಿಗೆ ಅವರೇ ಶಿಲ್ಪಿಗಳಾಗಿರುತ್ತಾರೆ. ಮನುಷ್ಯ ತನ್ನ ಜೀವನವನ್ನು ತನ್ನಿಷ್ಟದಂತೆ ರೂಪಿಸಿಕೊಳ್ಳುತ್ತಾನೆ, ಅಂದರೆ ತನ್ನೆಲ್ಲ ಆಲೋಚನೆಗಳ ವಸ್ತುರೂಪವೇ ಮನುಷ್ಯನಾಗಿರುತ್ತಾನೆ. ವ್ಯಕ್ತಿತ್ವವು ಹುಟ್ಟಿನಿಂದ ಸಾವಿನವರೆಗೆ ರೂಪುಗೊಳ್ಳುತ್ತಿರುತ್ತದೆ. Personality emerges early and continues to change in meaningful ways throughout the lifespan.

ಮನೋವಿಜ್ಞಾನಿಗಳ ಪ್ರಕಾರ ವ್ಯಕ್ತಿತ್ವವು ಐದು ಅಂಶಗಳನ್ನು ಆಧರಿಸಿದೆ. (The five factors have been defined as openness to experience, conscientiousness, extraversion, agreeableness, and neuroticism.) ಅವುಗಳೆಂದರೆ, ಮುಕ್ತ ಅನುಭವ, ಆತ್ಮಸಾಕ್ಷಿ ಭಾವ, ಬಹಿರ್ಮುಖತ್ವ, ಒಪ್ಪಿಕೊಳ್ಳುವ ಮನಸ್ಸು, ನರವ್ಯಾಧಿತನ ಇವು ಪ್ರಮುಖವಾದವುಗಳು.



ವ್ಯಕ್ತಿತ್ವ ವಿಕಸನಗೊಳ್ಳಲು ಪ್ರಮುಖವಾಗಿ ಆರು ವಿಷಯಗಳಲ್ಲಿ ತನ್ನದೇ ಆದ ಪ್ರಭುತ್ವವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಆ ಆರು ವಲಯಗಳೆಂದರೆ, ಭೌತಿಕ, ಬೌದ್ಧಿಕ, ಭಾವನಾತ್ಮಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ವಲಯಗಳು.

ವ್ಯಕ್ತಿತ್ವವನ್ನು ನಿರ್ಧರಿಸುವ ಅಂಶಗಳು

ವ್ಯಕ್ತಿತ್ವವನ್ನು ನಿರ್ಧರಿಸುವ ಪ್ರಮುಖ ಅಂಶಗಳೆಂದರೆ, ಭೌತಿಕ ಬೆಳವಣಿಗೆಯ ಮಟ್ಟ, ಬೌದ್ಧಿಕ ಬೆಳವಣಿಗೆ ಮಟ್ಟ, ಭಾವನಾತ್ಮಕ ಬೆಳವಣಿಗೆ, ಮಾನಸಿಕ ಬೆಳವಣಿಗೆ, ನೈತಿಕ ಬೆಳವಣಿಗೆ, ನೀತಿಯನ್ನು ಗುರುತಿಸುವ ಅಂಶಗಳು ಮತ್ತು ಆಧ್ಯಾತ್ಮಿಕ ಬೆಳವಣಿಗೆ ಈ ಕೆಳಕಂಡ ಅಂಶಗಳ ಕಡೆಗೆ ಹೆಚ್ಚಿನ ಲಕ್ಷ್ಯವಹಿಸಿದರೆ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ವೃದ್ಧಿಸಿಕೊಳ್ಳಬಹುದು. ಅವುಗಳೆಂದರೆ, ಪ್ರತಿ ದಿನವನ್ನೂ ಆಶಾದಾಯಕ ಹಾಗೂ ಅದೃಷ್ಟದ ದಿನವೆಂದು ಭಾವಿಸಬೇಕು. ಪ್ರತಿಯೊಂದು ವಿಚಾರದ ಕುರಿತೂ ಆಶಾದಾಯಕವಾಗಿರಬೇಕು. ಪ್ರತಿಯೊಂದರ ಬಗ್ಗೆಯೂ ಮನಸ್ಸಿನಲ್ಲಿ ಧನಾತ್ಮಕ ಚಿಂತನೆಯಿರಬೇಕು. ಪ್ರಾಮಾಣಿಕತೆಯೇ ಜೀವನದ ಪರಮ ಮಂತ್ರವಾಗಿರಬೇಕು. ನಿತ್ಯ ಹೊಸ ಅನುಭವವನ್ನು ಪಡೆಯುವ ಮನಸ್ಸಿರಬೇಕು. ಅನ್ಯರಿಗಾಗಿ ಪ್ರಾರ್ಥನೆಯನ್ನು ಮಾಡಬೇಕು. (ಪರರ ಹಿತವನ್ನು ಬಯಸಬೇಕು)

ಮುಕ್ತ ಮನೋಭಾವವಿರಬೇಕು. ಮಾನಸಿಕ ಚಟುವಟಿಕೆಯಿಂದ ಕೂಡಿರಬೇಕು. ತನ್ನ ನೈಜ ಪ್ರೀತಿಯನ್ನು ಎಲ್ಲರಿಗೂ ಹಂಚಬೇಕು. ಸ್ವಶಕ್ತಿಯಲ್ಲಿ ವಿಶ್ವಾಸವಿರಬೇಕು. ವರ್ತಮಾನದಲ್ಲಿ ಬದುಕುವ ಮನೋಭಾವವಿರಬೇಕು. ಹೆಚ್ಚು ಹೆಚ್ಚು ಮನನ ಮಾಡಿಕೊಳ್ಳುವುದು. ಯಾವುದನ್ನೂ ನಾಳೆ ಯಾ ನಾಡಿದ್ದು ಎಂದು ಮುಂದೂಡಬಾರದು. ಬೇರೆಯವರಿಂದ ಬರುವ ಹಿಮ್ಮಾಹಿತಿಯನ್ನು ಧನಾತ್ಮಕವಾಗಿ ಅಭ್ಯಸಿಸಬೇಕು. ವ್ಯಕ್ತಿತ್ವದ ಅಭಿವೃದ್ಧಿಯಲ್ಲಿ ಹವ್ಯಾಸವೂ ಪ್ರಮುಖ ಪಾತ್ರವಹಿಸುತ್ತದೆ. ವ್ಯಕ್ತಿಯೊಬ್ಬನ ವ್ಯಕ್ತಿತ್ವವು 25% ವಂಶಪಾರಂಪರ್ಯವಾಗಿ, ಹಾಗೂ ಉಳಿದ 75% ವ್ಯಕ್ತಿ ವಾಸಿಸುವ ಪರಿಸರವನ್ನು ಅವಲಂಬಿಸಿರುತ್ತದೆ.

ಭೌತಿಕ ಬೆಳವಣಿಗೆ

ಮಾನವ ಏನನ್ನಾದರೂ ಸಾಧಿಸಲು ಪ್ರಪ್ರಥಮವಾಗಿ ದೇಹ ವರ್ಧನೆ ಅತಿ ಮುಖ್ಯ. ಹಿರಿಯರು ಹೇಳುವಂತೆ 'ಘಟ ಇದ್ರೆ ಮಠ ಕಟ್ಟಬಹುದು', 'ಅಂಗಾಲಲ್ಲಿ ತ್ರಾಣ ಇದ್ರೆ ಬಂಗಾಳಕ್ಕಾದರು ನಡೀತೀನಿ' ಅಂದರೆ ದೇಹಾರೊಗ್ಯ ಅತಿ ಮುಖ್ಯ. ಇದನ್ನೇ ಸಂಸ್ಕೃತದಲ್ಲಿ 'ಶರೀರಮಾದ್ಯಂ ಖಲುಧರ್ಮ ಸಾಧನಮ್', 'ಹಿತ ಭುಕ್, ಮಿತ ಭಹುಕ್, ಋತ ಭುಕ್' 'ಧರ್ಮಾರ್ಥ ಕಾಮ ಮೋಕ್ಷಾಣಾಂ ಆರೋಗ್ಯಂ ಮೂಲಮುತ್ತಮಮ್'. ಅಂದರೆ ಜೀವನದಲ್ಲಿ ಯಾವುದೇ ಸಾಧನೆ ಮಾಡಲು ಆರೋಗ್ಯವೆಂಬುದು ಅತಿ ಅಗತ್ಯವೆಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ಆಂಗ್ಲ ಗಾದೆ ಹೇಳುವಂತೆ 'ಗಟ್ಟಿ ದೇಹದಲ್ಲಿ ಗಟ್ಟಿ ಚಿಂತನೆಗಳಿರುತ್ತವೆ' ಎನ್ನುವುದನ್ನು ಅರಿತು ದೈಹಿಕವಾಗಿ ಸಮರ್ಥರಿರಬೇಕು. ಇದಕ್ಕಾಗಿ ಉತ್ತಮ ಹವ್ಯಾಸಗಳು ಮತ್ತು ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು.

ವ್ಯಕ್ತಿತ್ವವನ್ನು ನಿರ್ಧರಿಸುವ ಪ್ರಮುಖ ಅಂಶಗಳೆಂದರೆ, ಭೌತಿಕ ಬೆಳವಣಿಗೆಯ ಮಟ್ಟ, ಬೌದ್ಧಿಕ ಬೆಳವಣಿಗೆ ಮಟ್ಟ, ಭಾವನಾತ್ಮಕ ಬೆಳವಣಿಗೆ, ಮಾನಸಿಕ ಬೆಳವಣಿಗೆ, ನೈತಿಕ ಬೆಳವಣಿಗೆ, ನೀತಿಯನ್ನು ಗುರುತಿಸುವ ಅಂಶಗಳು ಮತ್ತು ಆಧ್ಯಾತ್ಮಿಕ ಬೆಳವಣಿಗೆ ಈ ಕೆಳಕಂಡ ಅಂಶಗಳ ಕಡೆಗೆ ಹೆಚ್ಚಿನ ಲಕ್ಷ್ಯವಹಿಸಿದರೆ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ವೃದ್ಧಿಸಿಕೊಳ್ಳಬಹುದು.

ಬೌದ್ಧಿಕ ಬೆಳವಣಿಗೆ

ಜೀವನದಲ್ಲಿ ಯಾವುದೇ ಸಾಧನೆಗೆ ಮಾನವನ ಬುದ್ಧಿ ಪ್ರಮುಖ ಪಾತ್ರ ವಹಿಸುತ್ತದೆ. ಮಾನವನ ಧೀಶಕ್ತಿಯಿಂದಾಗಿ ಇಂದಿನ ಎಲ್ಲ ಚಟುವಟಿಕೆಗಳು ಜರುಗುತ್ತಿವೆ. ವಿದ್ಯೆ ಬುದ್ಧಿ ಇವೆರಡು ಶಬ್ದಗಳು ಜೀವನ ಪರ್ಯಂತ ಜೊತೆ ಜೊತೆಯಲ್ಲೇ ಸಾಗುತ್ತಿರುತ್ತವೆ. ಹಾಗಾಗಿಯೇ ಬುದ್ಧಿಗೆ ಸಂಬಂಧಿಸಿದಂತೆ ಹಿರಿಯರು ಹಲವಾರು ಗಾದೆಮಾತುಗಳನ್ನು ಕಟ್ಟಿದ್ದಾರೆ. 'ಅರಿವು ಇದ್ರೆ ಮರೆವು ಬರಲ್ಲ', 'ಹೇಳಿಕೊಟ್ಟ ಬುದ್ಧಿ ಕಟ್ಟಿಕೊಟ್ಟ ಬುತ್ತಿ ಬಾಳ ದಿನ ಉಳಿಯಲ್ಲ'. 'ಹೇಳೋರಿಗೆ ಸುದ್ದಿ, ಕೇಳೋರಿಗೆ ಬುದ್ಧಿ', 'ಚಾಡಿ ಮಾತ ಕೇಳಿ ಚಾವಡಿ ಹಾಳಾಯ್ತಂ', 'ಓದು ಒಕ್ಕಾಲು, ಬುದ್ಧಿ ಮುಕ್ಕಾಲು', 'ಕ್ಷಣಂ ಚಿತ್ತಂ, ಕ್ಷಣಂ ವಿತ್ತಂ. ಕುಶಾಗ್ರ ಬುದ್ಧಿನೋ, ಮುಸಲಾಗ್ರ ಬುದ್ಧಿನೋ? ವಿದ್ಯೆಗೆ ಎಣೆಯಿಲ್ಲ, ಬುದ್ಧಿಗೆ ಕಡೆಯಿಲ್ಲ, ಘೃತ ಬುದ್ಧಿಯೋ, ತೈಲ ಬುದ್ಧಿಯೋ? ವಿದ್ಯೆ ಬುದ್ಧಿಗ್ ಮೂಲ, ಬುದ್ಧಿ ಸೌಖ್ಯಕ್ಕೆ ಮೂಲ', 'ಬುದ್ಧಿ ಉಂಟೆ ಬುವ್ವ ತಿಂಟಾಡು, ಲೇಕುಂಟೆ ಗುವ್ವ ತಿಂಟಾಡು'.

ಅಂದರೆ, ಬುದ್ಧಿ ಮಾನವ ಜನಾಂಗದ ಸರ್ವತೋಮುಖ ಬೆಳವಣಿಗೆಗೆ ಅತ್ಯವಶ್ಯಕ. ಯಾವುದನ್ನೇ ತಿಳಿಯುವ ಶಕ್ತಿ, ವಿಷಯದ ಬಗೆಗಿನ ತಿಳುವಳಿಕೆ, ವಿಷಯದ ಬಗೆಗಿನ ಆಳವಾದ ಅರಿವು, ವ್ಯಕ್ತಿಯ ಸ್ವಭಾವ, ಜ್ಞಾನ ಈ ಎಲ್ಲವೂ ಜಾಣತನ ಅಥವಾ ವ್ಯಕ್ತಿಯ ಬುದ್ಧಿಯನ್ನು ಅವಲಂಬಿಸಿರುತ್ತವೆ.

ಭಾವನಾತ್ಮಕ ಬೆಳವಣಿಗೆ:

ಸಹಜವಾಗಿಯೇ ಮಾನವ ಭಾವನಾತ್ಮಕ ಜೀವಿ. ಭಾವನೆಗಳೇ ಇಲ್ಲದವನು ಪಶು ಸಮಾನ. ಭಾವನೆಗಳು ಮಾನವನನ್ನು ತನ್ನ ಜೀವನದ ಬಗ್ಗೆ ಕನಸು ಕಾಣಲು ಪ್ರೇರೆಪಿಸುತ್ತವೆ. ಸ್ವಪ್ನರಹಿತ ಜೀವನವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಭಾವನೆಗಳು ಜ್ಞಾನಕ್ಕಿಂತ ಹೆಚ್ಚು ಪರಿಣಾಮಕಾರಿ. ಭಾವನೆಗಳೆಂಬ ಅಗ್ನಿಗೆ ಆಸೆ ಆಕಾಂಕ್ಷೆಗಳೇ ಸೌದೆಗಳು. ಭಾವನೆಗಳು ಅಂತರಂಗದ ಗತಿಬಿಂಬ ಪ್ರತಿಬಿಂಬಗಳಂತೆ. ಯದ್ಭಾವಂ ತದ್ಭವತಿ, ನಿಮ್ಮ ಭಾವನೆಗಳು ಶುಭ್ರವಾಗಿದ್ದರೆ ಒತ್ತಡಗಳಿಗೆ ಅವಕಾಶವಿರದು. ನಕಾರಾತ್ಮಕ ಚಿಂತನೆಗಳಿಂದ ದೂರ ನಿಂತಾಗ



ಸಕಾರಾತ್ಮಕ ಭಾವನೆಗಳ ಜನನವಾಗುತ್ತದೆ. ಭಾವನೆಗಳು ಸ್ಪಷ್ಟವಾಗುತ್ತಾ ಹೋದಂತೆ ಸೃಜನಶೀಲತೆ ಹಾಗು ಆತ್ಮವಿಶ್ವಾಸಗಳು ವರ್ಧಿಸುತ್ತವೆ.

ಮಾನಸಿಕ ಬೆಳವಣಿಗೆ

ವ್ಯಕ್ತಿತ್ವ ವಿಕಸನದಲ್ಲಿ ಮಾನಸಿಕ ಬೆಳವಣಿಗೆ ಪ್ರಮುಖ ಪಾತ್ರ ವಹಿಸಿದರೆ, ಮನಸ್ಸು ವ್ಯಕ್ತಿತ್ವದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತದೆ. ಇಚ್ಛಾಶಕ್ತಿ ಕ್ರಿಯಾ ಶಕ್ತಿಗಳು ಸಕಾರಾತ್ಮಕವಾಗಿದ್ದಲ್ಲಿ ಮನಸ್ಸು ಸದಾ ಉತ್ಸಾಹಭರಿತವಾಗಿರುತ್ತದೆ. ಎಲ್ಲ ಬಗೆಯ ನಂಬಿಕೆಗಳು ಮನಸ್ಸನ್ನು ಆಧರಿಸಿರುತ್ತವೆ. ಇದನ್ನೇ ರಾಷ್ಟ್ರಕವಿ ಕುವೆಂಪುರವರು ಹೀಗೆ ಹೇಳುತ್ತಾರೆ.. 'ಎಷ್ಟು ದೇವರ ನೀನೆಷ್ಟು ನಂಬಿದರೇನು, ಒಂದಿಷ್ಟು ನಂಬದಿರೆ ನಿನ್ನ ನೀನು' ಎಂದು.

ಮಾನಸಿಕವಾಗಿ ಅತಿ ಎತ್ತರಕ್ಕೆ ಬೆಳೆಯಲಾಗದಿದ್ದರೂ ಎಲ್ಲರ ಮನಸ್ಸಿಗೆ ಹತ್ತಿರವಾಗಿ ಬೆಳೆಯಬೇಕು. ಮನಸ್ಸನ್ನು ಕೆರಳಿಸಬಾರದು ಆದರೆ ಅರಳಿಸಬೇಕು. ಮನಸ್ಸನ್ನು ಅರಳಿಸಿ ಪಳಗಿಸಿದರೆ, ಸುಖ ದುಃಖಗಳಲ್ಲಿ ಸಮತೆಯನ್ನು ಹೊಂದಿ ಎಲ್ಲ ಕನಸುಗಳನ್ನು ನನಸಾಗಿಸಿಕೊಳ್ಳಬಹುದು. ಮನಸ್ಸು ಪರಿಶುದ್ಧವಾಗಿದ್ದರೆ ಶತ್ರುವೂ ಮಿತ್ರನಾಗುತ್ತಾನೆ. ಗಾದೆ ಮಾತು ಹೇಳುವಮತೆ 'ಮನಸ್ಸಿನಂತೆ ಮಹದೇವ' ಎಲ್ಲಕ್ಕೂ ಮನಸ್ಸೇ ಕಾರಣ. ಇದನ್ನೇ ಸಂಸ್ಕೃತದಲ್ಲಿ ಹೀಗೆ ಹೇಳುತ್ತಾರೆ. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ' ಅಂದರೆ ಮಾನವ ಬಯಸುವ ಮೋಕ್ಷ ಬಂಧನಗಳಿಗೆ ಮನಸ್ಸೇ ಮುಖ್ಯ ಕಾರಣವಾಗುತ್ತದೆ.

ಜಾನ್ಮಿಲ್ಟನ್ ಹೇಳುವಂತೆ 'ಮನಸ್ಸಿಗೆ ಮನವೇ ನೆಲೆ ಮನಸ್ಸು ತನ್ನಲ್ಲಿಯೇ ಎಲ್ಲವನ್ನೂ ಕಲ್ಪಿಸಿಕೊಳ್ಳುತ್ತದೆ. ನಾಕ ನರಕಗಳೆರಡೂ ಮನಸ್ಸಿನಲ್ಲಿಯೇ ಇರುತ್ತವೆ. ನರಕದಿಂದ ನಾಕವನ್ನೂ, ನಾಕದಿಂದ ನರಕವನ್ನೂ ಮನಸ್ಸೇ ನಿರ್ಧರಿಸುತ್ತದೆ'. ಚಿನ್ಮಯ ಚಿಂತಾಮಣಿ ಹೇಳುವಂತೆ 'ಜನಿಸಿದ ರಾಗಾಧಿಕಮೆಂಬೀ, ಘನಕಲ್ಲೋಲಗಳಿಂದ, ಮನವೆಂಬ ಉದಕವು ಕದಡದಿರೆ, ಚಿನ್ಮಯನಿಲ್ಲಿಯೇ ತೋರ್ಕುಮ್'. ಕರ್ಮಯೋಗಿ ಸಿದ್ಧರಾಮ ಹೇಳುವಂತೆ 'ಮನವೆಂದು ಬೇರಿಲ್ಲ, ಮಹಾದೇವನ ಅರುಹು ನೋಡಾ, ಸಂಕಲ್ಪ ವಿಕಲ್ಪಗಳ ಧರಿಸಿದಲ್ಲಿ ಮನವೆನಿಸೀತು'.



ತಿಳಿದವರು ಕಥೆಯಿಲ್ಲದ ಮನೆಯೆಲ್ಲಿದೆ? ವ್ಯಥೆಯಿಲ್ಲದ ಮನವೆಲ್ಲಿದೆ? ಅಂದರೆ, ಮಾನಸಿಕ ಸಮತೋಲನವೇ ಪ್ರಬುದ್ಧತೆ ಎಂದು ಹಿರಿಯರು ಹೇಳಿದ್ದಾರೆ. ಇದನ್ನೇ ಸಂಸ್ಕೃತದಲ್ಲಿ 'ಜಿತೇ ಮನಸಿ ಸರ್ವಮ್' ಅಂದರೆ ಮನಸ್ಸನ್ನು ಗೆದ್ದರೆ ಪ್ರಪಂಚವನ್ನು ಗೆದ್ದಂತೆಯೇ ಎಂದು ಹೇಳಲಾಗಿದೆ.

ನೈತಿಕ ಬೆಳವಣಿಗೆ:

ನೀತಿ ಸಮಾಜದ ಸಂಸ್ಕೃತಿಯ ನಿಯಮ. ನೀತಿಸಾರದ ಬಗ್ಗೆ ಸಾಕಷ್ಟು ಗ್ರಂಥಗಳು ರಚನೆಯಾಗಿವೆ. ಮಾನವ ಮನಸ್ಸಿಗೆ ಸರಿ ತಪ್ಪುಗಳನ್ನು ತೋರಿಸುವ ಪ್ರಮುಖ ಕೆಲಸ ಮಾಡುವುದೇ ನೀತಿ. ನೀತಿಯ ಬಗೆಗೆ ಪ್ರಪಂಚವೇ ಮಾತಾಡುತ್ತಿರುತ್ತದೆ ಆದರೆ ಪಾಲನೆಯಲ್ಲಿ ಹಿಂದು ಮುಂದಾಗಿರುತ್ತದೆ. ನೀತಿ ಸದಾ ಸಮುದಾತದ ಸಮಾಜದ ಅಭ್ಯುದಯವನ್ನು ಬಯಸುತ್ತದೆ. ಹಿಂದೂ ಪರಂಪರೆಯಲ್ಲಿ ಎಲ್ಲ ವೇದಗಳು, ಉಪನಿಷತ್ತುಗಳು, ಪುರಾಣಗಳು ನೀತಿಯನ್ನು ಒತ್ತಿ ಹೇಳುತ್ತವೆ. ಅತ್ಯಂತ ಪ್ರಚಲಿತವಿರುವ ಗೋವಿನ ಹಾಡಿನಲ್ಲಿ ನೀತಿಯ ಎಳೆಗಳನ್ನು ಗುರುತಿಸಬಹುದು. ಸತ್ಯವೇ ನಮ ತಾಯಿ ತಂದೆ ಸತ್ಯವೇ ನಮ ಬಂಧು ಬಳಗ ಸತ್ಯ ವಾಕ್ಯಕೆ ತಪ್ಪಿ ನದೆದರೆ ಮೆಚ್ಚನಾ ಪರಮಾತ್ಮನು ಎಂದು.

ನೀತಿಯನ್ನು ಗುರುತಿಸುವ ಅಂಶಗಳು

ನಿಷ್ಪಕ್ಷಪಾತತೆ, ಕ್ಷಮೆ, ನಮ್ರತೆ, ಸ್ವನಿಯಂತ್ರಣ, ಸಹಿಷ್ಣುತೆ, ಒಳ್ಳೆಯತನ, ಅಂಟಿಕೊಳ್ಳದಿರುವುದು, ಧ್ಯಾನ, ಘನತೆ, ಸ್ಥೈರ್ಯ, ಸಹಾನುಭೂತಿ, ವಿಧೇಯತೆ, ಇಂದ್ರಿಯ ನಿಗ್ರಹಗಳು ಮನುಷ್ಯನ ನೀತಿಯನ್ನು ಗುರುತಿಸುತ್ತವೆ. ಸಂಸ್ಕೃತ ಸುಭಾಷಿತದಲ್ಲಿ 'ಪರೋಪಕಾರಾರ್ಥೇ ಫಲಂತಿ ವೃಕ್ಷಃ ಪರೋಪಕಾರಾರ್ಥೇ ದುಹಂತಿ ಗಾವಃ ಪರೋಪಕಾರಾರ್ಥೇ ವಹಂತಿ ನದಯಾ ಪರೋಪಕಾರಾರ್ಥಮಿದಂ ಶರೀರಮ್' ಎಂದು ಹೇಳಲಾಗಿದೆ. ಅಂದರೆ ಪರರಿಗಾಗಿಯೇ ಮರಗಳು ಹಣ್ಣನ್ನು ಕೊಡುತ್ತವೆ, ಪರರಿಗಾಗಿಯೇ ಹಸುಗಳು ಹಾಲನ್ನು ಕೊಡುತ್ತವೆ, ಪರರಿಗಾಗಿಯೇ ನದಿಗಳು ಹರಿಯುತ್ತವೆ, ಇಡೀ ಪ್ರಕೃತಿಯೆ ಪರರ ಸೇವೆಯಲ್ಲಿ ತೊಡಗಿರುವಾಗ ಮಾನವರಾಗಿ ಬೇರೆಯವರ ಒಳಿತಿಗಾಗಿ ಬದುಕನ್ನು ಸವೆಸಬೇಡವೇ ಎಂದು. ಇದನ್ನೇ ನಮ್ಮ ಹಿರಿಯರು 'ತಿರ್ಕೊಂಡ್ ತಿಂದ್ರೂ, ಕರ್ಕೊಂಡ್ ಉಣ್ಬೇಕಂತೆ' ಎಂದು ಹೇಳಿದ್ದಾರೆ.

ಆಧ್ಯಾತ್ಮಿಕ ಬೆಳವಣಿಗೆ:

ಮಾನವ ಜೀವನದಲ್ಲಿ ಅತಿ ಶ್ರೇಷ್ಠವಾದ ಕೆಲಸ ಅಥವಾ ಕರ್ಮವೆಂದರೆ ಆತ್ಮಚಿಂತನೆ. ಮಾನವ ಭಗವಂತನೊಡನೆ ನಡೆಸುವ ಸಂವಾದವೇ ಆಧ್ಯಾತ್ಮ. ಆತ್ಮ ಮತ್ತು ಪರಮಾತ್ಮರ ನಡುವಿನ ಸಂಬಂಧ ವ್ಯತ್ಯಾಸ, ಹಾಗೂ ಪರಿಕಲ್ಪನೆ, ಮುಕ್ತಿ ಅಥವಾ ಪರಿನಿರ್ವಾಣ, ದ್ವೈತ ಅದ್ವೈತಗಳ ಪರಿಕಲ್ಪನೆ. ಹೀಗೆ ಜೀವನ ಪರ್ಯಂತ ಆತ್ಮಾನುಭವದ



ಸಂತೋಷ್ ರಾವ್ ಪೆರ್ಮುಡ.
ಪಟ್ರಮೆ ಗ್ರಾಮ-ಅಂಚೆ
ಬೆಳ್ತಂಗಡಿ ತಾಲೂಕು, ದ.ಕ ಜಿಲ್ಲೆ

ಹುಡುಕಾಟವೇ ಆಧ್ಯಾತ್ಮ. ತತ್ವಜ್ಞಾನವು ಆಧ್ಯಾತ್ಮದ ಅಡಿಗಲ್ಲಾಗಿದೆ. ಪಾಪ ಮತ್ತು ಪುಣ್ಯಗಳನ್ನು ಇಲ್ಲಿ ಅನುಭವಿಸಿ ಮುಕ್ತಿಗಾಗಿ ಹುಡುಕಾಡುತ್ತೇವೆ. ನಾನು ನನ್ನದೆಂಬ ಅಹಂಕಾರದಿಂದ ಹೊರಬರಲು ಪ್ರಯತ್ನಿಸುತ್ತೇವೆ. ಜನನ ಮರಣ ಚಕ್ರದಿಂದ ಬಿಡುಗಡೆ ಹೊದಲು ತವಕಿಸುತ್ತೇವೆ. ಇದನ್ನೇ ಶಂಕರಾಚಾರ್ಯರು 'ಪುನರಪಿ ಜನನಂ, ಪುನರಪಿ ಮರಣಮ್, ಪುನರಪಿ ಜನನೇ ಜಠರೇ ಶಯನಮ್' ಎಂದು ಸಂಸ್ಕೃತದಲ್ಲಿ ಹೇಳಿದ್ದಾರೆ

'ಸತ್ಸಂಗತ್ವೇ ನಿಸ್ಸಂಗತ್ವಮ್, ನಿಸ್ಸಂಗತ್ವೇ ನಿರ್ಮೋಹತ್ವಮ್, ನಿರ್ಮೋಹತ್ವೇ ನಿಶ್ಚಲ ತತ್ವಮ್, ನಿಶಚಲ ತತ್ವೇ ಜೀವನ್ಮುಕ್ತಿಃ' 'ಅವಶ್ಯಂ ಅನುಭೋಕ್ತವ್ಯಂ, ಕೃತಕರ್ಮ ಶುಭಾಶುಭಂ' ಅಂದರೆ ಜೀವನದಲ್ಲಿ ನಾವು ಮಾಡಿದ ಒಳಿತು ಕೆಡಕುಗಳನ್ನು ನಾವು ಇಲ್ಲಿಯೇ ಅನುಭವಿಸಿ ತೀರಬೇಕು. ಮೋಕ್ಷ ಎಂಬ ಮಾತು ಜೀವನದ ನಾಲ್ಕು ಹಂತಗಳ ಕೊನೆಯಲ್ಲಿ ಬರುತ್ತದೆ. ಜನ್ಮದಾರಭ್ಯ ಮರಣಾಂತ್ಯದವರೆಗೆ ಮೋಕ್ಷದ ಹುಡುಕಾಟ ಸಾಗಿದರೂ ಮೋಕ್ಷವಾಗದಿರಬಹುದು. ಉತ್ತಮ ಮನುಷ್ಯತ್ವ ಮುಮುಕ್ಷತ್ವದ ಕಡೆಗೆ ಕೊಂಡೊಯ್ಯುತ್ತದೆ. ಇದಕ್ಕೆ ಅತ್ಯಗತ್ಯವಾದದ್ದು ಭಕ್ತಿ. ಇದನ್ನೇ ಸಂಸ್ಕೃತದಲ್ಲಿ ಮೋಕ್ಷಕಾರಣ ಸಾಮ ಭಕ್ತಿರೇವ ಗರೀಯಸಿ' ಅಂದರೆ ಮೋಕ್ಷಕ್ಕೆ ಕಾರಣವಾಗುವ ಸಾಮಗ್ರಿಗಳಲ್ಲಿ ಭಕ್ತಿಯೇ ಶ್ರೇಷ್ಠವಾದುದು ಎನ್ನಲಾಗಿದೆ.

ಇಂಥ ಶ್ರೇಷ್ಠವಾದ ಭಕ್ತಿಯ ಕುರಿತು ಸರ್ವಜ್ಞನು ಭಕ್ತಿಯಿಂದಲೆ ಶಕ್ತಿ, ಭಕ್ತಿಯಿಂದಲೆ ಮುಕ್ತಿ, ಭಕ್ತಿವಿರಕ್ತಿ ಅಳಿದರೀ ಜಗದಲ್ಲಿ, ಮುಕ್ತಿಯಿಲ್ಲರಂದ ಸರ್ವಜ್ಞ, ಭಕ್ತ ಭಗವಂತರ ನಡುವಿನ ದ್ವಂದ್ವದ ಸನ್ನಿವೇಶವನ್ನು ಡಿ.ವಿ.ಗುಂಡಪ್ಪನವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ವರ್ಣಿಸಿದ್ದಾರೆ ದೇವರೆಂಬುದೇನು ಕಗ್ಗತ್ತಲೆಯ ಗವಿಯೇ? ನಾವರಿಯಲಾರದೆಲ್ಲದರ ಒಟ್ಟು ಹೆಸರೇ? ಕಾವನೋವನಿರಲ್ಕೆ ಜಗದ ಕತೆಯೇಕಿಂತು, ಸಾವು ಹುಟ್ಟುಗಳೇನು? ಮಂಕುತಿಮ್ಮ. ಅಂದರೆ ನರ ನಾರಾಯಣನಾಗಲು ಮೇಲೆ ಹೇಳಿರುವ ಆರೂ ಅಂಶಗಳನ್ನು ಮನನ ಮಾಡಿಕೊಂಡು ಮಾನವ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬಹುದು ಎಂದು.

ಇದನ್ನು ಸಂಸ್ಕೃತದಲ್ಲಿ 'ಯೇಷಾಂ ನ ವಿದ್ಯಾ ನ ತಪೋ ನ ದಾನಮ್, ನ ಜ್ಞಾನಂ ನ ಶೀಲಂ ನ ಗುಣೋ ನ ಧರ್ಮಃ,



ತೇ ಮರ್ತ್ಯ ಲೋಕೇ ಭುವಿ ಭಾರ ಭೂತಾಃ, ಮನುಷ್ಯರೂಪೇಣ ಮೃಗಾಶ್ಚರಂತಿ' ಎಂದು ಹೇಳಲಾಗಿದೆ. ಅಂದರೆ ಯಾರಲ್ಲಿ ವಿದ್ಯೆ ಇಲ್ಲವೋ, ಯಾರಲ್ಲಿ ದಾನವಿಲ್ಲವೋ, ಯಾರಲ್ಲಿ ಜ್ಞಾನವಿಲ್ಲವೋ, ಯಾರಲ್ಲಿ ಶೀಲವಿಲ್ಲವೋ, ಗುಣವಿಲ್ಲವೋ, ಧರ್ಮವಿಲ್ಲವೋ, ಅಂಥವರು ಈ ಭೂಮಿಗೆ ಭಾರವಾದ ಜೀವನವನ್ನು ನಡೆಸುತ್ತಾರೆ. ಹಾಗೆಯೇ ಮಾನವ ರೂಪದಲ್ಲಿದ್ದರೂ ಮೃಗಗಳಂತೆ ಬದುಕಿ ವ್ಯರ್ಥ ಜೀವನ ನಡೆಸುತ್ತಿರುತ್ತಾರೆ.

ಕನ್ನಡ ಪ್ರೀತಿಯ ಸಂಪಾದಕ ಇಂದುಶೇಖರ ಮಣೂರ

■ ಉದಯರಶ್ಮಿ ದಿನಪತ್ರಿಕೆ



ಇಂದುಶೇಖರ ಮಣೂರ ಅವರು ವಿಜಯಪುರ ಜಿಲ್ಲಾಡಳಿತದ ರಾಜ್ಯೋತ್ಸವ ಪುರಸ್ಕಾರಕ್ಕೆ ಪಾತ್ರರಾಗಿರುವುದು ಅಭಿನಂದನೀಯ. ಅವರ ಸಾರಥ್ಯದ "ಉದಯ ರಶ್ಮಿ" ದಿನಪತ್ರಿಕೆಯಲ್ಲಿ ಕೇವಲ ಸುದ್ದಿಗಳು ಅಷ್ಟೇ ಪ್ರಕಟ ವಾಗುವದಿಲ್ಲ, ಜೊತೆಗೆ ಯುವ ಕವಿಗಳು ತಾವು ಬರೆದಂತಹ ಲೇಖನ. ಕಥೆ, ಕವನಗಳು ಪ್ರಕಟವಾಗುತ್ತವೆ ಎಂಬ ಪ್ರೀತಿ ಮತ್ತು ಹೆಮ್ಮೆ ಲೇಖಕರದ್ದಾಗಿರುತ್ತದೆ. ಅಷ್ಟೇ ಅಲ್ಲದೆ ವಚನ ಸಾಹಿತ್ಯದ ಬಗ್ಗೆಯೂ ಒಲವು ಹೊಂದಿರುವಂತಹ ಸಂಪಾದಕರ ಪತ್ರಿಕೆಯನ್ನು ನಾವು ಗಮನಿಸಿದಾಗ ಬಸವಾದಿ ಶರಣರ ಜೀವನ ಚರಿತ್ರೆಯನ್ನು ಮತ್ತು ಅವರು ವಚನ ಸಾಹಿತ್ಯಕ್ಕೆ ಕೊಟ್ಟಂತಹ ಕೊಡುಗೆಗಳನ್ನು ಪ್ರಕಟಿಸಿರುವುದನ್ನು ನಾವು ಕಾಣುತ್ತೇವೆ.


"ಕನ್ನಡಕ್ಕೆ ಹೊರಾಡು ಕನ್ನಡದ ಕಂದ" ಎನ್ನುವ ಕವಿವಾಣಿಯಂತೆ ಮಾತೃಭಾಷೆ ಮೇಲೆ ಅಪಾರ ಪ್ರೀತಿ ಗೌರವವನ್ನು ಹೊಂದಿದ, ಮತ್ತು ಯುವ ಸಾಹಿತಿಗಳು ಹಾಗೂ ಲೇಖಕರಿಗೆ ಪ್ರೋತ್ಸಾಹ ನೀಡುವಂತಹ ಮತ್ತು ಅವರನ್ನು ಬೆಳೆಸುವಂತಹ ಕಾರ್ಯದಲ್ಲಿ ಸದಾ ಪ್ರವೃತ್ತರಾದ ಹೆಸರಾಂತ 'ಉದಯರಶ್ಮಿ' ದಿನಪತ್ರಿಕೆಯ ಸಂಪಾದಕ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ವಿಜಯಪುರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಅವರು ವಿಜಯಪುರ ಜಿಲ್ಲಾಡಳಿತದ ರಾಜ್ಯೋತ್ಸವ ಪುರಸ್ಕಾರಕ್ಕೆ ಪಾತ್ರರಾಗಿರುವುದು ಅಭಿನಂದನೀಯ.

ಸಮಾಜಮುಖಿ ಚಿಂತನೆಯ ಇಂದುಶೇಖರ ಮಣೂರ ಇವರು ಕನ್ನಡ ಕಟ್ಟುವಲ್ಲಿ ಸದಾ ಸಿದ್ಧ ಹಸ್ತರು ಎಂದು ಹೇಳಬಹುದು. ಏಕೆಂದರೆ "ಉದಯರಶ್ಮಿ" ದಿನಪತ್ರಿಕೆಯಲ್ಲಿ ಕೇವಲ ಸುದ್ದಿಗಳು ಅಷ್ಟೇ ಪ್ರಕಟ ವಾಗುವದಿಲ್ಲ, ಜೊತೆಗೆ ಯುವ ಕವಿಗಳು ತಾವು ಬರೆದಂತಹ ಲೇಖನ. ಕಥೆ, ಕವನಗಳು ಪ್ರಕಟವಾಗುತ್ತವೆ ಎಂಬ ಪ್ರೀತಿ ಮತ್ತು ಹೆಮ್ಮೆ ಲೇಖಕರದ್ದಾಗಿರುತ್ತದೆ. ಅಷ್ಟೇ ಅಲ್ಲದೆ ವಚನ ಸಾಹಿತ್ಯದ ಬಗ್ಗೆಯೂ ಒಲವು ಹೊಂದಿರುವಂತಹ ಸಂಪಾದಕರ ಪತ್ರಿಕೆಯನ್ನು ನಾವು ಗಮನಿಸಿದಾಗ ಒಬ್ಬೊಬ್ಬರ ಶರಣರ ಜೀವನ ಚರಿತ್ರೆಯನ್ನು ಮತ್ತು ಅವರು ವಚನ ಸಾಹಿತ್ಯಕ್ಕೆ ಕೊಟ್ಟಂತಹ ಕೊಡುಗೆಗಳನ್ನು ಪ್ರಕಟಿಸಿರುವುದನ್ನು ನಾವು ಕಾಣುತ್ತೇವೆ. ಅಲ್ಲದೆ ಪ್ರತಿಯೊಂದು ಬರಹಗಾರರಿಗೆ ಸದಾ ಅವಕಾಶ ಕೊಟ್ಟು ಲೇಖನಿಗೆ ಸೂಕ್ತ ಚಿತ್ರಗಳನ್ನು ಕೊಟ್ಟು ಆಕರ್ಷಕ ಲೇಖನಿಯನ್ನಾಗಿ ಮೂಡಿಸುವಂತಹ ಬರಹ ಚಾತುರ್ಯವನ್ನು ಹೊಂದಿದ್ದಾರೆ.

ಇತ್ತೀಚೆಗೆ ಶ್ರೀಯುತರಿಗೆ "ಬಸವಶ್ರೀ" ಪ್ರಶಸ್ತಿ ಬಂದಾಗ

ಅಭಿನಂದನೆಗಳನ್ನು ಹೇಳಲು ನಾನು ಅವರಿಗೆ ಫೋನ್ ಮಾಡಿದಾಗ "ನಮ್ಮದೇನು ಇಲ್ಲ ರೀ, ಎಲ್ಲ ಬಸವಣ್ಣನ ಆಶೀರ್ವಾದ" ಎಂದು ನುಡಿದ ಇವರು ತಮ್ಮ ಕಾರ್ಯಕ್ಷಮತೆಯ ಬಗ್ಗೆ ಎಲ್ಲೂ ಹೇಳಿಕೊಳ್ಳುವುದಿಲ್ಲ. ಹೊಗಳಿಕೆಗೆ ಎಂದೂ ಕಿವಿ ಕೊಡುವುದಿಲ್ಲ. ಇದು ಇವರ ದೊಡ್ಡ ಗುಣ ಎಂದು ಹೇಳಬಹುದು.

ಚಿಕ್ಕ ಮಕ್ಕಳ ಕಥೆಗಳಿಗೂ ಸಹ ಪ್ರೋತ್ಸಾಹ ನೀಡುತ್ತಾ ವಿದ್ಯಾರ್ಥಿಗಳ ಮನಸ್ಸನ್ನು ಗೆಲ್ಲುವತ್ತ ಮಹತ್ತರ ಹೆಜ್ಜೆಯನ್ನು ಇಟ್ಟಿರುವುದು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಸ್ಫೂರ್ತಿದಾಯಕವಾಗಿದೆ ಮುಂದಿನ ದಿನಗಳಲ್ಲಿ ಮಕ್ಕಳಿಗಾಗಿಯೇ ತಮ್ಮ ಪತ್ರಿಕೆಯಲ್ಲಿ ಒಂದು ಅಂಕಣವನ್ನು ಮೀಸಲಿಡಿಸಲಿ ಎನ್ನುವುದು ನನ್ನ ಆಶಯ. ಒಟ್ಟಾರೆಯಾಗಿ ಹೇಳುವುದಾದರೆ ನಗುಮೊಗದಿಂದಲೇ ಎಲ್ಲರನ್ನು ಗೆಲ್ಲುವ ಇಂದುಶೇಖರ ಮಣೂರ ಅವರಿಗೆ ಮತ್ತಷ್ಟು ಮಗದಷ್ಟು ಶ್ರೇಷ್ಠ ಪ್ರಶಸ್ತಿಗಳು ಇವರ ಮುಡಿಗೇರಲಿ.



ಇವರ ಸಾಧನೆಯನ್ನು ಕೊಂಡಾಡಲಿ ಎಂದು ಆಶಿಸುತ್ತಾ ಶುಭ ಹಾರೈಸುವೆ.

ಗದುಗಿನ ಡಾ. ಸಿದ್ದಲಿಂಗ ಶ್ರೀಗಳ ಶುಭಾಶಿರ್ವಾದ ತಮ್ಮ ಮೇಲಿರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.



- ಶಿಲ್ಪಾ ಮಿಣಜಗಿ
ಶಿಕ್ಷಕರು
ಧಾರವಾಡ



ಎರೆಹುಳು ಗೊಬ್ಬರ ಉತ್ಪಾದನೆಗೆ ಆದ್ಯತೆ ನೀಡಿ :ಡಿಸಿ

■ ಉದಯರಶ್ಮಿ ದಿನಪತ್ರಿಕೆ

■ ಬಸವನಬಾಗೇವಾಡಿ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಿಲ್ಲಾಧಿಕಾರಿ ಡಾ.ಆನಂದ್ ಕೆ ಭೇಟಿ, ಪರಿಶೀಲನೆ

ವಿಜಯಪುರ: ಬಸವನಬಾಗೇವಾಡಿ ಪಟ್ಟಣದ ಇವಣಗಿ ರಸ್ತೆಯಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಬುಧವಾರ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಭೇಟಿ ನೀಡಿ, ಘಟಕದ ಕಾರ್ಯನಿರ್ವಹಣೆ ಹಾಗೂ ಸ್ವಚ್ಛತಾ ವ್ಯವಸ್ಥೆಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಘಟಕದಲ್ಲಿ ಉತ್ಪಾದಿಸಲಾಗುತ್ತಿರುವ ಎರೆಹುಳು ಗೊಬ್ಬರ ತಯಾರಿಕಾ ಪ್ರಕ್ರಿಯೆಯನ್ನು ವೀಕ್ಷಿಸಿದ ಜಿಲ್ಲಾಧಿಕಾರಿಗಳು, ರೈತರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಗೊಬ್ಬರ ಲಭ್ಯವಾಗುವಂತೆ ಉತ್ಪಾದನೆ ಮತ್ತು ಮಾರಾಟಕ್ಕೆ ಕ್ರಮ ಕೈಗೊಳ್ಳಬೇಕು. ಗೊಬ್ಬರವನ್ನು ಕೃಷಿ ಚಟುವಟಿಕೆಗಳಿಗೆ ಪರಿಣಾಮಕಾರಿಯಾಗಿ ಬಳಸುವ ಕುರಿತು ರೈತರಿಗೆ ಮಾಹಿತಿ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಘ'ಟಕ'ದ'ಲ್ಲಿ ಸಂಗ್ರಹವಾಗುವ ಒಣ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಪ್ರತ್ಯೇಕಿಸಿ, ವ್ಯವಸ್ಥಿತವಾಗಿ ವಿಂಗಡಿಸಬೇಕು. ಮರುಬಳಕೆಗೆ ಯೋಗ್ಯವಾದ ವಸ್ತುಗಳನ್ನು ವಿಲೇವಾರಿ ಮಾಡಲು ಹೆಚ್ಚಿನ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಘಟಕದ ಆವರಣವನ್ನು ಸ್ವಚ್ಛವಾಗಿಟ್ಟುಕೊಂಡು ವಿವಿಧ ಗಿಡಮರಗಳನ್ನು ಬೆಳೆಸಿರುವುದಕ್ಕೆ ಜಿಲ್ಲಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಘಟಕದ ಲಭ್ಯವಿರುವ ಜಾಗದಲ್ಲಿ ಹಣ್ಣಿನ ಹಾಗೂ ಹೂವಿನ ಗಿಡಗಳನ್ನು ಬೆಳೆಸಿ, ಉದ್ಯಾನವನದ ಮಾದರಿಯಲ್ಲಿ ಹಸಿರು ಪರಿಸರ ನಿರ್ಮಿಸಿರುವ ಕಾರ್ಯವನ್ನು ಶ್ಲಾಘಿಸಿದರು. ಇದೇ ಮಾದರಿಯಲ್ಲಿ ಘಟಕದ ಉಳಿದ ಪ್ರದೇಶವನ್ನೂ ಅಭಿವೃದ್ಧಿಪಡಿಸುವಂತೆ ಸಲಹೆ ನೀಡಿದರು.

ಮನೆಮನೆಗೆ ತೆರಳಿ ಕಸ ಸಂಗ್ರಹಿಸುವ ಸಂದರ್ಭದಲ್ಲಿ ಹಸಿ ಮತ್ತು ಒಣ ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕಿಸುವುದನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು. ಪ್ರತಿಯೊಂದು ಮನೆಗೂ ಪ್ರತಿದಿನ ಕಸ ಸಂಗ್ರಹಣಾ ವಾಹನ ತೆರಳಬೇಕು. ಪಟ್ಟಣದ ರಸ್ತೆ ಬದಿಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಸಂಗ್ರಹವಾಗದಂತೆ ಮತ್ತು ಕಸದ ಒಂದೆಡೆ (ಬ್ಲ್ಯಾಕ್ ಸ್ಪಾಟ್) ಸಂಗ್ರಹವಾಗದಂತೆ ನಿರಂತರ ನಿಗಾ ವಹಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ವಿಜಯಪುರ ವಿಭಾಗಾಧಿಕಾರಿ ಜುಫಿಶಾನ್ ಹಕ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದಿನ್ ಸೌದಾಗರ್, ಪುರಸಭೆ ಮುಖ್ಯಾಧಿಕಾರಿ ಶಬ್ಬೀರ್ ರೇವೂರಕರ, ಆರೋಗ್ಯ ನಿರೀಕ್ಷಕರಾದ ವಂದಲ್ ಹಾಗೂ ಹಿರೇಮಠ, ಕಿರಿಯ ಅಭಿಯಂತರರಾದ ಸಂತೋಷ್ ಮತ್ತು ಜಂಬಗಿ ಮಹಾದೇವ್ ಉಪಸ್ಥಿತರಿದ್ದರು.



ವಚನ-ತತ್ವಪದದ ವೈಚಾರಿಕ ನೆಲೆಗಟ್ಟಿನ ಸಾಹಿತ್ಯ

ಕಮಲಾಪುರ: ಶರಣರು,ತತ್ವಪದಕಾರರ ಸಾತ್ವಿಕ ಚಿಂತನೆ, ಸಾಮಾಜಿಕ ಕಾಳಜಿ, ಮೌಢ್ಯ ನಿರಾಕರಣೆ, ಸಮಾನತೆ ತತ್ವ, ಜೀವನಾನುಭವ ಒಳಗೊಂಡಿರುವ ವಚನ ಹಾಗೂ ತತ್ವಪದ ವೈಚಾರಿಕ ನೆಲೆಗಟ್ಟಿನ ಸಾಹಿತ್ಯವಾಗಿದೆ ಎಂದು ಪ್ರೊ. ಲಿಂಗಪ್ಪ ಗೋನಾಳ ತಿಳಿಸಿದರು.

ಕಮಲಾಪುರ ತಾಲ್ಲೂಕಿನ ಮಹಾಗಾಂವ ಕ್ರಾಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ಬುಧವಾರ ಆಯೋಜಿಸಿದ್ದ ವಚನ ಸಾಹಿತ್ಯ ಮತ್ತು ತತ್ವ ಪದಗಳ ರಚನಿಕತೆ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ವಚನಗಳು ಉಪನಿಷತ್ತು, ಗಾಯತ್ರಿ ಮಂತ್ರಕ್ಕಿಂತಲೂ ಶ್ರೇಷ್ಠ. ಸುತ್ತಲಿನ ಪರಿಸರವನ್ನು ಅತಿ ಸೂಕ್ಷ್ಮವಾಗಿ ಗಮನಿಸಿ, ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸಿದ ಶರಣರು, ವಚನಗಳ ಮೂಲಕ ಜನಪರ ಸಂಸ್ಕೃತಿಯನ್ನು ಎತ್ತಿ ಹಿಡಿದರು ಎಂದು ಹೇಳಿದರು.

ಕೇವಲ ರಾಜ-ಮಹಾರಾಜರು ಮಾತ್ರ ಸಾಹಿತ್ಯದ ವಸ್ತುವಲ್ಲ. ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ವಿಷಯವೂ ಸಾಹಿತ್ಯದ ವಸ್ತುವಾಗುತ್ತದೆ ಎಂಬುದನ್ನು ವಚನಗಳು ಸಾರಿವೆ. ದೇವರ ಮೇಲಿನ ಭಕ್ತಿಗೆ ಮಧ್ಯವರ್ತಿ ಬೇಕಿಲ್ಲ ಎಂಬುದು ವಚನಗಳ ಸಂದೇಶ. ಗದ್ಯದ ಗಂಧ, ಪದ್ಯದ ಅಂದವನ್ನು ವಚನಗಳು ಒಳಗೊಂಡಿವೆ. ವಚನ ತತ್ವಪದಗಳಲ್ಲಿ ಚಿಕಿತ್ಸಕ ಪದ್ಧತಿಯೂ ಅಡಗಿದೆ. ವಚನ ಭಾಷೆ ಅಚ್ಚಗನ್ನಡ ಎಂದು ಅವರು ವಿವರಿಸಿದರು.

ಸೊಲ್ಲಾಪುರದ ಶರಣ ಚಿಂತಕಿ ರಾಜೇಶ್ವರಿ ಲೋಕಾಪುರ ಅವರು 'ವಚನ ಹಾಗೂ ತತ್ವಪದದಲ್ಲಿ ಕಾಯಕ ನಿಷ್ಠೆ' ವಿಷಯ ಕುರಿತು ವಿಚಾರ ಮಂಡಿಸಿದರು. ಕಾಯಕ ನಿರತನಾದರೆ ದೇವರನ್ನೂ ಮರೆಯಬೇಕು. ಕಾಯಕ ಮಾಡಿಯೇ ಪ್ರಸಾದ ಸ್ವೀಕರಿಸಬೇಕು ಎಂಬುದು ಶರಣರ ಸಂದೇಶ ಎಂದು ಅವರು ಹೇಳಿದರು.

ಶರಣಬಸವ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಚಿದಾನಂದ ಚಿಕ್ಕಮಠ ಅವರು 'ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳು' ಕುರಿತು ಮಾತನಾಡಿದರು.

ವಚನ ಸಾಹಿತ್ಯ ಮತ್ತು ತತ್ವಪದದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯದ ಬಹುಶಿಸ್ತೀಯ ಅಧ್ಯಯನ ಅಗತ್ಯವಿದೆ. ಅನುಭವ ಮಂಟಪದಲ್ಲಿ ಪ್ರಜಾಸತ್ತಾತ್ಮಕತೆ ಇತ್ತು. ಮಾತನಾಡುವ ಹಕ್ಕಿನ ಜೊತೆಗೆ ಮಾತಿಗೆ ಮಹತ್ವವಿತ್ತು. ಸರ್ವ ಸಮ್ಮತದ ಮಾತುಗಳೇ ವಚನಗಳು. ಸಂವಿಧಾನದ ಬಹುತೇಕ ಅಂಶಗಳು ವಚನ, ತತ್ವಪದಗಳಲ್ಲಿ ಇವೆ ಎಂದು ಅವರು ವಿವರಿಸಿದರು.

ಶಾಸಕ ಬಸವರಾಜ ಮತ್ತಿಮಡು, ವಕೀಲರ ಸಂಘದ ಅಧ್ಯಕ್ಷ ಶಿವಕುಮಾರ ಪಸಾರ, ಮಲ್ಲಿಕಾರ್ಜುನ ಮರತೂರಕರ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ವಡ್ಡನಕೇರಿ, ಲಕ್ಷ್ಮಣ ಬೋಸ್ಲೆ, ತೀರ್ಥಕುಮಾರ ಬೆಳಕೋಟಾ, ತಾಲ್ಲೂಕು ಘಟಕದ ಅಧ್ಯಕ್ಷ ಶರಣಬಸಪ್ಪ ವಡ್ಡನಕೇರಿ, ಪ್ರಾಧ್ಯಾಪಕ ಅನಿಲಕುಮಾರ ಹಾಲು, ಕರಿಗುಳೇಶ್ವರ, ಶ್ರೀಕಾಂತ ಪಾಟೀಲ, ಉಮೇಶ ಸಾಗರ, ಪ್ರಕಾಶ ಖೋಬ್ರೆ, ಕಾಶಿನಾಥ ಪಾಟೀಲ, ಸಾವಿತ್ರಿ ಮಠ, ಶಿಲ್ಪಾ ಗಾಂವಕರ, ಜ್ಯೋತಿರ್ಮಯ ಖಡಕೆ ಮತ್ತಿತರು ಭಾಗವಹಿಸಿದ್ದರು. ಬಸವಣ್ಣನವರು ಬಾಬಾಸಾಹೇಬ್ ಅಂಬೇಡ್ಕರ್ ಅವರ ತಾತ್ವಿಕ ಚಿಂತನೆ ಭಾರತದ ಪ್ರಜಾಸತ್ತಾತ್ಮ ವ್ಯವಸ್ಥೆಯನ್ನು ಬಲಪಡಿಸಿವೆ. ಸಂಸತ್ತು ಪರಿಕಲ್ಪನೆ ಸಂವಿಧಾನ ನಿಯಮಗಳು 12 ಶತಮಾನದಲ್ಲಿ ಶರಣರು ಪ್ರತಿಪಾದಿಸಿದ್ದಾರೆ

ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ದನಿ ಎತ್ತಲಿ, ರಾಜಕೀಯ ಮೆಚ್ಚಿಸುವ ಕೆಲಸ ಬೇಡ: ದೇವೇಂದ್ರ ದೇಸಾಯಿ ಕಲ್ಲೂರ್

ಕಲಬುರಗಿ: ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷರಾದ ಲಕ್ಷ್ಮಣ್ ದಸ್ತಿ ಅವರು ಇತ್ತೀಚೆಗೆ ಕಲಬುರಗಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಪ್ರಸ್ತಾಪಿಸಿರುವ ವಿಚಾರಗಳ ಕುರಿತು ಪ್ರತಿಕ್ರಿಯಿಸಿರುವ ದೇವೇಂದ್ರ ದೇಸಾಯಿ ಕಲ್ಲೂರ್ ಅವರು, ಕಲ್ಯಾಣ ಕರ್ನಾಟಕದ ನೈಜ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು ದಶಕಗಳಿಂದ ಅಭಿವೃದ್ಧಿಯಲ್ಲಿ ಹಿಂದುಳಿದಿವೆ. ಈ ಭಾಗದ ಜನರಿಗೆ ಶಿಕ್ಷಣ, ಉದ್ಯೋಗ, ಕೈಗಾರಿಕೆ, ಆರೋಗ್ಯ, ರಸ್ತೆ, ನೀರಾವರಿ ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳು ಇನ್ನೂ ಸಮರ್ಪಕವಾಗಿ ದೊರೆತಿಲ್ಲ. ಇಂತಹ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಇದುವರೆಗೆ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇನು? ಎಷ್ಟು ಅನುದಾನ ಬಿಡುಗಡೆಯಾಗಿದೆ? ಎಷ್ಟು ಯೋಜನೆಗಳು ಪೂರ್ಣಗೊಂಡಿವೆ? ಎಂಬುದರ ಕುರಿತು ಲಕ್ಷ್ಮಣ್ ದಸ್ತಿ ಅವರು ಸರ್ಕಾರವನ್ನು ಪ್ರಶ್ನಿಸಬೇಕು.

ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಅವರ ವಿರುದ್ಧ ಮಾತನಾಡುವ ನೈತಿಕ ಹಕ್ಕು ನಿಮಗಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದೇ ರೀತಿ ಕಲ್ಯಾಣ ಕರ್ನಾಟಕದ ಜಿಲ್ಲಾ ಉಸ್ತುವಾರಿ ಸಚಿವರು ಈ ಭಾಗದ ಅಭಿವೃದ್ಧಿಗೆ ಏನು ಕೊಡುಗೆ ನೀಡಿದ್ದಾರೆ ಎಂಬುದರ ಬಗ್ಗೆಯೂ ದಸ್ತಿ ಅವರು



ಧ್ವನಿ ಎತ್ತಲಿ. ಆಡಳಿತ ಪಕ್ಷದ ಸಚಿವರ ಕಾರ್ಯವೈಖರಿಯನ್ನು ಪ್ರಶ್ನಿಸುವ ಧೈರ್ಯ ತೋರಲಿ.

ಕೇವಲ ಕಾಂಗ್ರೆಸ್ ನಾಯಕರನ್ನು ಮೆಚ್ಚಿಸುವ ಉದ್ದೇಶದಿಂದ ಬಿ.ವೈ. ವಿಜಯೇಂದ್ರ ಅವರ ವಿರುದ್ಧ ಮಾತನಾಡುವುದು ಎಷ್ಟರಮಟ್ಟಿಗೆ ಸಮಂಜಸ? ಒಬ್ಬ ಹೋರಾಟಗಾರರಾಗಿ ನಿಮ್ಮ ಜವಾಬ್ದಾರಿ ರಾಜಕೀಯ ನಾಯಕರನ್ನು ಮೆಚ್ಚಿಸುವುದಲ್ಲ; ಬದಲಾಗಿ ಈ ಭಾಗದ ಜನರ ಸಮಸ್ಯೆಗಳಿಗೆ ನ್ಯಾಯ ಕೊಡಿಸುವುದಾಗಿದೆ. ರಾಜಕೀಯ ಪಕ್ಷಗಳ ಪರ ಅಥವಾ ವಿರೋಧವಾಗಿ ಮಾತನಾಡುವುದಕ್ಕಿಂತ ಜನರ ಪರವಾಗಿ ಮಾತನಾಡುವುದು ಮುಖ್ಯ.

ಕೇವಲ ರಾಜಕೀಯ ಪಕ್ಷಗಳನ್ನು ಮೆಚ್ಚಿಸುವ ಅಥವಾ ರಾಜಕೀಯ ವಿಚಾರಗಳಿಗೆ ಹೆಚ್ಚಿನ ಆದ್ಯತೆ ನೀಡುವ ಬದಲು, ಕಲಬುರಗಿ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ತಮ್ಮ ಹೋರಾಟವನ್ನು ಮೀಸಲಿಡಬೇಕು.

ಸಂವಿಧಾನದ ವಿಧಿ 371(ಜೆ) ಅಡಿಯಲ್ಲಿ ಕಲ್ಯಾಣ ಕರ್ನಾಟಕದ ಜನರಿಗೆ ದೊರೆತಿರುವ ವಿಶೇಷ ಸೌಲಭ್ಯಗಳು ಮತ್ತು ಹಕ್ಕುಗಳನ್ನು ರಕ್ಷಿಸುವುದು ಅತ್ಯಂತ ಮುಖ್ಯವಾಗಿದೆ. ಈ ಭಾಗದ ಜನರ ಹಕ್ಕುಗಳಿಗೆ ಧಕ್ಕೆಯಾಗುವ ಯಾವುದೇ ಪ್ರಯತ್ನ ನಡೆದರೆ ಅದರ ವಿರುದ್ಧ ದಸ್ತಿ ಅವರು ಹೋರಾಟ ನಡೆಸಲಿ. ವಿಜಯಪುರ ಜಿಲ್ಲೆಯನ್ನು 371(ಜೆ) ವ್ಯಾಪ್ತಿಗೆ ಸೇರಿಸುವ ವಿಚಾರದಲ್ಲಿಯೂ ಸಂವಿಧಾನಾತ್ಮಕ ಅಂಶಗಳು ಹಾಗೂ ಕಲ್ಯಾಣ ಕರ್ನಾಟಕದ ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸ್ಪಷ್ಟ ನಿಲುವು ವ್ಯಕ್ತಪಡಿಸಲಿ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಕಾರ್ಯವೈಖರಿ, ಅನುದಾನದ ಸಮರ್ಪಕ ಬಳಕೆ, ಖಾಲಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ, 371(ಜೆ) ಪರಿಣಾಮಕಾರಿ ಅನುಷ್ಠಾನ ಹಾಗೂ ಕೈಗಾರಿಕೆಗಳ ಸ್ಥಾಪನೆ ಕುರಿತು ಸರ್ಕಾರವನ್ನು ನಿರಂತರವಾಗಿ ಪ್ರಶ್ನಿಸಲಿ. ಈ ಭಾಗದ ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರೆಯುವಂತೆ, ರೈತರಿಗೆ ಅನುಕೂಲವಾಗುವಂತೆ ಹಾಗೂ ಕಲಬುರಗಿ ಜಿಲ್ಲೆ ಅಭಿವೃದ್ಧಿಯಲ್ಲಿ ಮುಂಚೂಣಿಗೆ ಬರುವಂತೆ ಹೋರಾಟ ಮಾಡಲಿ.

ಲಕ್ಷ್ಮಣ್ ದಸ್ತಿ ಅವರೇ, ರಾಜಕೀಯ ನಾಯಕರನ್ನು ಮೆಚ್ಚಿಸುವುದಕ್ಕಿಂತ ಕಲ್ಯಾಣ ಕರ್ನಾಟಕದ ಜನರ ಮನಸ್ಸು ಗೆಲ್ಲುವ ಕೆಲಸ ಮಾಡಿ. ಈ ಭಾಗದ ಏಳು ಜಿಲ್ಲೆಗಳ ಅಭಿವೃದ್ಧಿಗಾಗಿ ನಿಮ್ಮ ಹೋರಾಟ ಇರಲಿ. ನಿಮ್ಮ ಹೋರಾಟವು ಯಾವುದೇ ರಾಜಕೀಯ ಪಕ್ಷದ ಪರವಾಗಿರದೆ, ಕಲ್ಯಾಣ ಕರ್ನಾಟಕದ ಜನರ ಹಕ್ಕು, ಅಭಿವೃದ್ಧಿ ಮತ್ತು ಭವಿಷ್ಯದ ಪರವಾಗಿರಲಿ ಎಂಬುದು ನಮ್ಮ ಆಶಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಯನಗರ ಕುಡಿಯುವ ನೀರು ಪರಿಹಾರಕ್ಕೆ ಒಂದು ವಾರ ಗಡುವು

ಕಲಬುರಗಿ: ಪ್ರಸಕ್ತ ವರ್ಷ ಮಳೆ ಅಭಾವದಿಂದ ವಾರ್ಡ್ ನಂ.48 ರಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದ್ದು,ಇದರ ಪರಿಹಾರಕ್ಕೆ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಒಂದು ವಾರ ಗಡುವು ನೀಡಲಾಗುವುದು ಎಂದು ಶಾಶ್ವತ ಕುಡಿಯುವ ನೀರು ಪರಿಹಾರ ಹೋರಾಟ ಜಂಟಿ ಕ್ರಿಯಾ ಸಮಿತಿ ತಿಳಿಸಿದೆ.

ಜಯನಗರ ಶಿವ ಮಂದಿರದಲ್ಲಿ ಬುಧವಾರ ಸಂಜೆ ಜಯನಗರ ಅಭಿವೃದ್ಧಿ ಸಂಘ, ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ಹಾಗೂ ಡಾಕ್ಟರ್ಸ ಕಾಲೋನಿ ಈಶ್ವರ ಮಂದಿರ ಕಮಿಟಿ ಹಮ್ಮಿಕೊಂಡಿದ್ದ ಸಭೆಯಲ್ಲಿ ವಿವಿಧ ಬಡಾವಣೆಗಳ ಸಾರ್ವಜನಿಕರೊಂದಿಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ನಂತರ ಮಾತನಾಡಿದ ಹೋರಾಟಗಾರ ಹಾಗೂ ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಡಾ.ಲಿಂಗರಾಜ ಸಿರಗಾಪೂರ ವಾರ್ಡ್ ನಂ.48 ರಲ್ಲಿ ಬರುವ ಜಯನಗರ, ಪೂಜಾ ಕಾಲೋನಿ,ಡಾಕ್ಟರ್ಸ್ ಕಾಲೋನಿ, ಧನ್ವಂತರಿ ನಗರ,ತಿಲಕ್ ನಗರ ಸೇರಿದಂತೆ ಈ ಬಾರಿ ಮಳೆ ಅಭಾವದಿಂದ ಹಲವು ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.ಕೊಳವೆ ಬಾವಿಗಳು ಬತ್ತಿ ಹೋಗಿವೆ.ನೀರಿಗಾಗಿ ದುಡ್ಡು ಕೊಟ್ಟು ಟ್ಯಾಂಕರ್ ಮೊರೆ ಹೋಗುವುದು ಅನಿವಾರ್ಯವಾಗಿದೆ.ಆದರೆ ಮಹಾನಗರ ಪಾಲಿಕೆ ಕುಡಿಯುವ ನೀರು ಸರಬರಾಜಿಗೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.ಹಲವಾರು ವರ್ಷಗಳಿಂದ ಜಯನಗರ ಸೇರಿದಂತೆ ಸುತ್ತಲಿನ ಬಡಾವಣೆಗಳಲ್ಲಿ ನೀರಿನ ತಾಪತ್ರಯವಿದೆ.ಕುಡಿಯವ ನೀರಿನ ಶಾಶ್ವತ ಪರಿಹಾರಕ್ಕಾಗಿ ಪರಿಹಾರಕ್ಕೆ ಗಡುವು ನೀಡಲಾಗಿದೆ.ನಮ್ಮ ಬೇಡಿಕೆ ಈಡೇರದಿದ್ದರೆ ರಸ್ತೆ ತಡೆ ನಡೆಸಲು ನಿರ್ಧರಿಸಲಾಗಿದೆ ಎಂದು ಎಚ್ಚರಿಕೆ ನೀಡಿದರು.



ಜಯನಗರ ಅಭಿವೃದ್ಧಿ ಸಂಘದ ಅಧ್ಯಕ್ಷ ಡಾ.ಕೆ.ಎಸ್. ವಾಲಿ ಅವರು ಮಾತನಾಡಿ ಶಾಸಕರಿಗೆ, ಅಧಿಕಾರಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವಂತೆ ಆಗ್ರಹಿಸಿ ಹಲವಾರು ಬಾರಿ ಮನವಿ ಪತ್ರ ಸಲ್ಲಿಸಿದರು ಯಾವುದೇ ಪ್ರಯೋಜನವಾಗಿಲ್ಲ.ಬಡಾವಣೆಗಳ ಅನೇಕ ಮನೆಗಳಿಗೆ ನಳ ಸಂಪರ್ಕ ಕಡಿತಗೊಂಡಿದೆ.ನೀರು ಪೂರೈಸುವ ಪೈಪುಗಳು ಹಳೆಯದಾಗಿ ಒಡೆದು ಹೋಗಿವೆ.ಹೊಸ ಪೈಪುಗಳು ಹಾಕಿಸಬೇಕು ಎಂದು ಒತ್ತಾಯಿಸಿದ ಅವರು ಶಾಶ್ವತವಾಗಿ ಕುಡಿಯುವ ನೀರು ಸರಬರಾಜು ಮಾಡುವಂತೆ ಆಗ್ರಹಿಸಿ ನಿರಂತರ ಹೋರಾಟ ನಡೆಸಲು ಶಾಶ್ವತ ಕುಡಿಯುವ ನೀರು ಪರಿಹಾರ ಹೋರಾಟ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷರನ್ನಾಗಿ ಹೋರಾಟಗಾರ ಡಾ.ಲಿಂಗರಾಜ ಸಿರಗಾಪೂರ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.ನಂತರ ಉಳಿದ ಪದಾಧಿಕಾರಿಗಳ ನೇಮಕ ಮಾಡಲಾಗುವುದು ಎಂದು ತಿಳಿಸಿದರು.

ಡಾಕ್ಟರ್ಸ್ ಕಾಲೋನಿ ಈಶ್ವರ ಮಂದಿರ ಕಮಿಟಿ ಅಧ್ಯಕ್ಷ ಡಾ.ಎಸ್.ಆರ್.ಮುತ್ತಗಿ,ಡಾ.ಬಸವರಾಜ ಗುಳಶೆಟ್ಟಿ, ಹಿರಿಯ ಮುಖಂಡರಾದ ಆರ್.ಎಸ್.ಭೋಗಶೆಟ್ಟಿ, ವೀರೇಶ ದಂಡೊತಿ,ಡಾ.ಶಿವಕುಮಾರ ಚೇಂಗಟಿ, ಶಿವಾನಂದ ಹಾಗರಗಿ,ಡಾ.ಸುರೇಶ ಜಾಧವ, ವಿನೋದ ಪಾಟೀಲ ಮಾತನಾಡಿದರು.ಸೂರ್ಯಕಾಂತ ಕೆ.ಬಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಮುಖರಾದ ಭೀಮಾಶಂಕರ ಶೆಟ್ಟಿ, ಗುರುಪಾದಪ್ಪ ಕಾಂತಾ,ಎಸ್.ಎ.ಬೀರಾದಾರ, ಎಸ್.ವಿ.ಹತ್ತಿ, ಬಸವರಾಜ ಮಾಗಿ,ಎಸ್.ಡಿ.ಹೀರೇಮಠ, ವೀರಪ್ಪ ಹುಡುಗಿ, ವಿಶ್ವನಾಥ ತಡಕಲ, ಮಲ್ಲಿಕಾರ್ಜುನ ಕಲ್ಲಾ, ಮಲ್ಲಯ್ಯ ಸ್ವಾಮಿ ಗಂಗಾಧರಮಠ, ವಿಜಯಕುಮಾರ ಸಿಂಪಿ, ಅಶೋಕ ಕುಮಾರ ಪಾಟೀಲ, ಶಿವಾನಂದ ಬಿ.ಎನ್, ಬಸವರಾಜ ಪುರ್ಮಾ,ಜಿ.ಮಲ್ಲಿನಾಥ, ಶಾಂತಪ್ಪ ಮೇಳಕುಂದಿ,ಆರ್.ಬಿ.ಮಲ್ಲಿಕಾರ್ಜುನ, ಶಿವಪುತ್ರಪ್ಪ ಮರಡಿ,ಎಂ.ರಾಚಪ್ಪ, ಸೋಮಶೇಖರ್ ನಂದಿಧ್ವಜ, ರಾಜಕುಮಾರ ಇಂಡಿ,ಎಸ್.ಎಸ್.ಹರಸೂರ, ಶರಣಪ್ಪ ಸೋನೆಗಾರ ಸೇರಿದಂತೆ ವಿವಿಧ ಬಡಾವಣೆಗಳ ನೂರಾರು ಜನರು ಭಾಗವಹಿಸಿ ಸಲಹೆ ನೀಡಿದರು.



ಜಿಲ್ಲಾ ಮಟ್ಟದ ಜಾನಪದ ಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ

ಕಲಬುರಗಿ : ಶಾಲಾ ಶಿಕ್ಷಣ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಲಬುರಗಿ ಜಿಲ್ಲಾ ಸಂಸ್ಥೆವತಿಯಿಂದ ಹಮ್ಮಿಕೊಂಡ ಜಿಲ್ಲಾ ಮಟ್ಟದ ದೇಶಭಕ್ತಿ ಗೀತ ಗಾಯನ ಹಾಗೂ ಜಾನಪದ ಗೀತೆ ಸ್ಪರ್ಧೆಯಲ್ಲಿ ಗೋದುತಾಯಿ ದೊಡ್ಡಪ್ಪ ಅಪ್ಪ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಪ್ರಥಮ ಸ್ಥಾನ ಪಡೆದಿದ್ದಾರೆ.ಅಫಜಲಪೂರ ರಸ್ತೆಯಲ್ಲಿರುವ ಮೌಂಟ್ ಜಿ ಲಿಟರಾ ಶಾಲೆಯಲ್ಲಿ ಸೋಮವಾರ ನಡೆದ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯರು ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿನಿಯರ ಸಾಧನೆಗೆ ಮಹಾವಿದ್ಯಾಲಯ ಸ್ಕೌಟ್ಸ್ ಮತ್ತು ಗೈಡ್ಸ ಸಂಯೋಜಕಿ ಡಾ.ರಾಜಲಕ್ಷ್ಮೀ ಮತ್ತು ಶ್ರೀಮತಿ ಪ್ರಭಾವತಿ ಸಹಕರಿಸಿದ್ದಾರೆ. ಮಹಾವಿದ್ಯಾಲಯ ಪ್ರಾಚಾರ್ಯೆ ಡಾ.ಸೀಮಾ ಪಾಟೀಲ, ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

ತಮ್ಮೂರಿನಲ್ಲಿಯೇ ಉಚಿತ ಕಾನೂನು ಅರಿವು ನೆರವು ಪಡೆದುಕೊಳ್ಳಿ


ಕಲಬುರಗಿ:ನಮ್ಮ ದೇಶದಲ್ಲಿ ಪ್ರತಿಯೊಬ್ಬ

ನಾಗರಿಕನಿಗೂ ಕಾನೂನಿನ ರಕ್ಷಣೆ ಪಡೆಯುವ ಹಕ್ಕಿದೆ. ಆದರೆ ಕಾನೂನಿನ ಅರಿವಿನ ಕೊರತೆಯಿಂದ ಅನೇಕರು ತಮ್ಮ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಕಲಬುರಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ಯಾನಲ್ ವಕೀಲರಾದ ಹಣಮಂತರಾಯ ಅಟ್ಟೂರ ಹೇಳಿದರು.ಕಲಬುರಗಿ ತಾಲ್ಲೂಕಿನ ಹರಸೂರ ಗ್ರಾಮ ಪಂಚಾಯತ ಆವರಣದಲ್ಲಿ ಕಾನೂನು ಅರಿವು ಹಾಗೂ ನೆರವು ಬಗ್ಗೆ ಮಾತನಾಡುತ್ತ

ಗ್ರಾಮೀಣ ಭಾಗದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ್ಯವಿವಾಹ,

ಪೊಕ್ಸೋ ಅಪರಾಧಗಳು, ವರದಕ್ಷಿಣೆ ಕಿರುಕುಳ, ಆಸ್ತಿ ವಿವಾದ, ಜಮೀನು ಸಮಸ್ಯೆ, ಕೂಲಿ ಕಾರ್ಮಿಕರ ಶೋಷಣೆ ಮುಂತಾದ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತವೆ.ಇಂತಹ ಸಂದರ್ಭದಲ್ಲಿ ನೀವು ಭಯಪಡುವ ಅಗತ್ಯವಿಲ್ಲ. ಕಾನೂನು ಸೇವಾ ಪ್ರಾಧಿಕಾರ ನಿಮ್ಮ ರಕ್ಷಣೆಗೆ ಇದೆ.ಹಣ ಇಲ್ಲದ ಕಾರಣ ನ್ಯಾಯ ಸಿಗುವುದಿಲ್ಲ ಎಂದು ಯಾರೂ ಭಾವಿಸಬೇಡಿ. ಅರ್ಹ ವ್ಯಕ್ತಿಗಳಿಗೆ ಪ್ರಾಧಿಕಾರದ ಮೂಲಕ ಉಚಿತ ವಕೀಲರ ನೆರವು ದೊರೆಯುತ್ತದೆ.

ಯಾವುದೇ ಅನ್ಯಾಯ ನಡೆದಾಗ ಮೌನವಾಗಿರಬೇಡಿ. ಮಹಿಳೆಯರು ತಮ್ಮಹಕ್ಕುಗಳನ್ನು ತಿಳಿದುಕೊಳ್ಳಬೇಕು. ಮಕ್ಕಳು ಶಿಕ್ಷಣ ಪಡೆಯಬೇಕು. ಹಿರಿಯ ನಾಗರಿಕರು ಗೌರವಯುತವಾಗಿ ಬದುಕಬೇಕು. ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಪಾಲಿಸಬೇಕು.



ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ಪುರಸ್ಕೃತರಾದ ಕನ್ನಡ ಪ್ರಭಾ ದಿನ ಪತ್ರಿಕೆ ಇಂಡಿ ತಾಲೂಕು ವರದಿಗಾರು ಹಾಗೂ ಪೂರ್ವಿ ಉದಯ ದಿನ ಪತ್ರಿಕೆ ಸಂಪಾದಕ ಖಾಜು ಸಿಂಗೆಗೋಳ ಹಾಗೂ ಹಿರೇಬೇವನೂರ ಗ್ರಾಮದ ಶಿಕ್ಷಕ, ಆರ್.ಬಿ.ಪಾಟೀಲ ಅವರನ್ನು ತಾಲೂಕು ಪತ್ರಕರ್ತರ ಬಳಗದಿಂದ ಮಂಗಳವಾರ ನಗರದ ಪ್ರವಾಸಿ ಮಂದಿರದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಎ.ಸಿ.ಪಾಟೀಲ ಮಾತನಾಡಿ, ಕರ್ನಾಟಕವು ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಸಮಾಜ ಸೇವೆ, ಶಿಕ್ಷಣ ಮತ್ತು ವಿಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆಗೈದ ದಕ್ಷ ಪ್ರಾಮಾಣಿಕ ಪತ್ರಕರ್ತ ಖಾಜು ಸಿಂಗೆಗೋಳ ಅವರಿಗೆ ಈ ಬಾರಿ ಕರ್ನಾಟಕ ರಾಜ್ಯ ಉತ್ಸವ ಜಿಲ್ಲಾ ಮಟ್ಟದ ಪ್ರಶಸ್ತಿ ಸಿಕ್ಕಿದ್ದು ತುಂಬಾ ಸಂತೋಷವಾಗಿದೆ ಎಂದರು.

ವಿಜಯ ಕರ್ನಾಟಕ ದಿನಪತ್ರಿಕೆಯ ವರದಿಗಾರರಾದ ಉಮೇಶ್ ಕೋಳೇಕರ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಾದ ಪತ್ರಕರ್ತ ಖಾಜು ಸಿಂಗೆಗೋಳ, ಆರ್.ವಿ.ಪಾಟೀಲ ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸುವುದು ತುಂಬಾ ಸಂತೋಷವಾಗಿದೆ ಎಂದರು.


ಸಂದರ್ಭದಲ್ಲಿ ಪತ್ರಕರ್ತರಾದ ಉಮೇಶ ಬಳಬಟ್ಟಿ, ಯಲಗೊಂಡ ಬೇವನೂರ, ಶಂಕರ ಜಮದಾರ, ಸಚೀನ ಇಂಡಿ, ತುಕಾರಾಮ ಪವಾರ, ಅರವಿಂದ್ ಕಾಂಬಳೆ, ಅಲ್ಲಾಬಕ್ಷ ಗೋರೆ, ಕಾಶಿನಾಥ ಕ್ಷೇತ್ರಿ, ಫಯಾಜ್ ಬಾಗವಾನ, ಮಲ್ಲಿಕಾರ್ಜುನ ಹಾವಿನಾಳಮಠ, ಮಹೇಶ್ ಶಿವಶರಣ, ರಾಮು ಯಂಕಚ್ಚಿ, ಸಿದ್ದು ಕೋಷ್ಠಿ ಸೇರಿದಂತೆ ಅನೇಕರು ಇದ್ದರು.

ರಾಷ್ಟ್ರಕವಿ ಕುವೆಂಪು, ರಾಷ್ಟ್ರನಾಯಕ ಎಸ್.ನಿಜಲಿಂಗಪ್ಪ ಒಡನಾಟ

■ ಉದಯರಶ್ಮಿ ದಿನಪತ್ರಿಕೆ



ಕರ್ನಾಟಕದ ಎರಡು ಅಪರೂಪದ ಅಮೂಲ್ಯ ಆಸ್ತಿಗಳು ಎಂದರೆ ಒಬ್ಬರು ಸನ್ಮಾನ್ಯ ಶ್ರೀ ಎಸ್ ನಿಜಲಿಂಗಪ್ಪನವರು. ಇನ್ನೊಬ್ಬರು ರಾಷ್ಟ್ರಕವಿ ಕುವೆಂಪು. ಅವರಿಬ್ಬರ ಒಡನಾಟ ಸಂಬಂಧಗಳ ಕುರಿತಾದ ಕೆಲ ಸಂಗತಿಗಳು.



ರಾಷ್ಟ್ರಕವಿ ಕುವೆಂಪು ಮತ್ತು ನವಕರ್ನಾಟಕದ ನಿರ್ಮಾತೃ ಹಾಗೂ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ನಡುವಿನ ಸಂಬಂಧವು ಪರಸ್ಪರ ಗೌರವ, ಪ್ರೀತಿ ಮತ್ತು ನಾಡು-ನುಡಿಯ ಬದ್ಧತೆಯಿಂದ ಕೂಡಿದ್ದಾಗಿತ್ತು.

ರಾಜಕಾರಣ ಮತ್ತು ಸಾಹಿತ್ಯ ಕ್ಷೇತ್ರಗಳ ಈ ಇಬ್ಬರು ಧ್ರುವತಾರೆಗಳ ನಡುವಿನ ಬಾಂಧವ್ಯವನ್ನು ಪ್ರತಿಬಿಂಬಿಸುವ ಕೆಲವು ಪ್ರಮುಖ ಘಟನೆಗಳು ಹಾಗೂ ವಿಚಾರಗಳು :

ಕರ್ನಾಟಕ ಏಕೀಕರಣ ಚಳವಳಿ ಮತ್ತು ಬೆಂಬಲ

ಭಾಷಾವಾರು ಪ್ರಾಂತ್ಯಗಳ ರಚನೆ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ಎಸ್. ನಿಜಲಿಂಗಪ್ಪನವರು ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿದ್ದರು. ಈ ಸಂದರ್ಭದಲ್ಲಿ ಕುವೆಂಪು ಅವರು ತಮ್ಮ ಸಾಹಿತ್ಯ ಹಾಗೂ ಭಾಷಣಗಳ ಮೂಲಕ ಏಕೀಕರಣ ಚಳವಳಿಗೆ ಭೌದ್ಧಿಕ ಮತ್ತು ಸಾಂಸ್ಕೃತಿಕ ಶಕ್ತಿಯನ್ನು ತುಂಬಿದ ಅನಕೃ ನಂತರದ ಏಕೈಕ ಸಾಹಿತಿಗಳು.

ನಿಜಲಿಂಗಪ್ಪನವರ ರಾಜಕೀಯ ನಾಯಕತ್ವಕ್ಕೆ ಕುವೆಂಪು ಅವರ ವೈಚಾರಿಕ ನಿಲುವುಗಳು ದೊಡ್ಡ ಬೆಂಬಲವಾಗಿದ್ದವು.

ನಾಡು,
ನುಡಿ ಮತ್ತು ಸಂಸ್ಕೃತಿಯ ಹಿತದೃಷ್ಟಿಯಿಂದ ಸಾಹಿತ್ಯ ಮತ್ತು ರಾಜಕೀಯ ರಂಗಗಳು ಹೇಗೆ ಜೊತೆಯಾಗಿ ಸಾಗಬಹುದು ಎಂಬುದಕ್ಕೆ ಕುವೆಂಪು ಮತ್ತು ಎಸ್. ನಿಜಲಿಂಗಪ್ಪನವರ ಒಡನಾಟ ಒಂದು ಅಪರೂಪದ ಉದಾಹರಣೆಯಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆ

ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಅವಧಿಯಲ್ಲಿ (1956ರ ಸುಮಾರಿಗೆ) ಎಸ್. ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ ಕನ್ನಡವನ್ನು ಬೋಧನಾ ಮಾಧ್ಯಮವನ್ನಾಗಿ ತರಲು ಕುವೆಂಪು ಶ್ರಮಿಸಿದರು. ಈ ದಿಸೆಯಲ್ಲಿ ಕುವೆಂಪು ಅವರು ಅಂದಿನ ಮುಖ್ಯಮಂತ್ರಿಯಾಗಿದ್ದ ಎಸ್ ನಿಜಲಿಂಗಪ್ಪನವರಿಗೆ ಪತ್ರ ಬರೆದು ಮೈಸೂರು ವಿಶ್ವ ವಿದ್ಯಾಲಯದ ಆವರಣದಲ್ಲಿ ಕನ್ನಡವನ್ನು ಬೋಧನಾ ಮಾಧ್ಯಮವನ್ನಾಗಿ ತರುವ ಯೋಜನೆಗಾಗಿ ಮಾನ್ಯ ನಿಜಲಿಂಗಪ್ಪನವರನ್ನು ಭೇಟಿ ಆಗಲು ವಿನಂತಿಸಿಕೊಂಡಿದ್ದರು. ಆಗ



ಸರ್ಕಾರದ ಮುಖ್ಯಸ್ಥರಾಗಿ ಶ್ರೀ ಎಸ್ ನಿಜಲಿಂಗಪ್ಪನವರು ಕುವೆಂಪು ಅವರಿಗೆ ಪತ್ರ ಬರೆದು ತಮ್ಮಂತಹ ಹಿರಿಯ ಸಾಹಿತಿಗಳು ಕನ್ನಡದ ಆಸ್ತಿ ತಾವು ಬೆಂಗಳೂರಿಗೆ ಬರಬಾರದು ನಿಮ್ಮ ಕಾರ್ಯಕ್ಕೆ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಮತ್ತು ಆಡಳಿತಾಧಿಕಾರಿಗಳನ್ನು ಕಳುಹಿಸಿ ಕೊಡುತ್ತೇನೆ ಎಂದು ಹೇಳಿ ಮರು ಪತ್ರ ಬರೆದರು. ಕುವೆಂಪು ಅವರ ಶಿಕ್ಷಣ ಮತ್ತು ಭಾಷಾ ಸುಧಾರಣೆಗಳಿಗೆ ಪೂರ್ಣ ಸ್ವಾತಂತ್ರ್ಯ ಹಾಗೂ ಆಡಳಿತಾತ್ಮಕ ಸಹಕಾರವನ್ನು ನೀಡಿದ್ದರು. ರಾಜಕಾರಣಿಗೆ ಕುವೆಂಪು ನೀಡಿದ ಆದರ್ಶ ವ್ಯಾಖ್ಯಾನ ಕುವೆಂಪು



ಅವರು ತಮ್ಮ ಕಾವ್ಯ ಹಾಗೂ ವೈಚಾರಿಕ ಬರಹಗಳಲ್ಲಿ "ರಾಜಕಾರಣಿಗಳು ಹೇಗಿರಬೇಕು? ಅವರ ನೈತಿಕತೆ ಎಂತಿರಬೇಕು?" ಎಂದು ವಿವರಿಸಿದ್ದರು. ಎಸ್. ನಿಜಲಿಂಗಪ್ಪನವರ ಅತ್ಯಂತ ಸರಳ, ಪ್ರಾಮಾಣಿಕ ಮತ್ತು ಭ್ರಷ್ಟಾಚಾರರಹಿತ ಬದುಕು ಕುವೆಂಪು ಅವರ ಆ ಆದರ್ಶಗಳಿಗೆ ಕನ್ನಡಿ ಹಿಡಿದಂತಿತ್ತು. ಇದೇ ಕಾರಣಕ್ಕೆ ಚಿತ್ರದುರ್ಗದಲ್ಲಿರುವ ನಿಜಲಿಂಗಪ್ಪನವರ ಸಮಾಧಿ ಸ್ಥಳವನ್ನು (ಪುಣ್ಯಭೂಮಿ) ಇಂದಿಗೂ "ಕುವೆಂಪು ಅವರು ವ್ಯಾಖ್ಯಾನಿಸಿದ ಆದರ್ಶ ರಾಜಕಾರಣಿಯ ಬದುಕಿಗೆ ಸಾಕ್ಷಿ" ಎಂದು ಬಣ್ಣಿಸಲಾಗುತ್ತದೆ.

ಪರಸ್ಪರ ಗೌರವ ಮತ್ತು ಸಾಹಿತ್ಯಿಕ ಒಡನಾಟ

ಎಸ್. ನಿಜಲಿಂಗಪ್ಪನವರಿಗೆ ಸಾಹಿತ್ಯದ ಮೇಲೆ ಅಪಾರ ಆಸಕ್ತಿ ಇತ್ತು. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕುವೆಂಪು ಅವರನ್ನು ಕಂಡಾಗ ನಿಜಲಿಂಗಪ್ಪನವರು ಅತ್ಯಂತ ವಿನಯದಿಂದ ಗೌರವಿಸುತ್ತಿದ್ದರು. ರಾಜಕೀಯದ ಉನ್ನತ ಹುದ್ದೆಯಲ್ಲಿದ್ದರೂ ಕುವೆಂಪು ಅವರಂತಹ ಸಾಂಸ್ಕೃತಿಕ ನಾಯಕರ ಮಾರ್ಗದರ್ಶನಕ್ಕೆ ಅವರು ಸದಾ ಸಿದ್ಧರಿರುತ್ತಿದ್ದರು.

ನಾಡು, ನುಡಿ ಮತ್ತು ಸಂಸ್ಕೃತಿಯ ಹಿತದೃಷ್ಟಿಯಿಂದ ಸಾಹಿತ್ಯ ಮತ್ತು ರಾಜಕೀಯ ರಂಗಗಳು ಹೇಗೆ ಜೊತೆಯಾಗಿ ಸಾಗಬಹುದು ಎಂಬುದಕ್ಕೆ ಕುವೆಂಪು ಮತ್ತು ಎಸ್. ನಿಜಲಿಂಗಪ್ಪನವರ ಒಡನಾಟ ಒಂದು ಅಪರೂಪದ ಉದಾಹರಣೆಯಾಗಿದೆ. ಇಂದು ಸಾಹಿತ್ಯ ಮತ್ತು ರಾಜಕಾರಣ ಎರಡೂ ಭ್ರಷ್ಟಾಚಾರದ ವಿಷಯ ಸಂಗತಿಗಳಾಗಿವೆ. ಕುವೆಂಪು ಅಂತಹ ಒಬ್ಬ ದಿಟ್ಟ ವೈಚಾರಿಕ ಸಾಹಿತಿ ಎಸ್ ನಿಜಲಿಂಗಪ್ಪನವರಂತಹ ಅಪ್ಪಟ ಭಾರತೀಯ ಪ್ರಾಮಾಣಿಕ ರಾಜಕಾರಣಿ ಈಗ ನೆನಪು ಮಾತ್ರ.



ಪತ್ರಕರ್ತ ಖಾಜು ಸಿಂಗೆಗೋಳ ಗೆ ಸನ್ಮಾನ

ಉದಯರಶ್ಮಿ ದಿನಪತ್ರಿಕೆ

ಚಡಚಣ: ಪತ್ರಿಕೋದ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ಸಾಧನೆ ಹಾಗೂ ಸೇವೆಯ ಮೂಲಕ ವಿಜಯಪುರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಕನ್ನಡ ದಿನಪತ್ರಿಕೆಯ ವರದಿಗಾರರು ಹಾಗೂ 'ಪೂರ್ವಿ ಉದಯ' ದಿನಪತ್ರಿಕೆಯ ಸಂಪಾದಕರಾದ ಖಾಜು ಸಿಂಗೆಗೋಳ ಅವರನ್ನು ಇಂಡಿ ಪತ್ರಿಕಾಭವನದಲ್ಲಿ ಆತ್ಮೀಯವಾಗಿ ಸನ್ಮಾನಿಸಿ, ಗೌರವಿಸಿ ಅಭಿನಂದಿಸಲಾಯಿತು. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅವರ ಸಾಧನೆ ಮತ್ತು ಸೇವೆಯನ್ನು ಗುರುತಿಸಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು ಸಂತಸದ ಸಂಗತಿಯಾಗಿದ್ದು, ಮುಂದಿನ ದಿನಗಳಲ್ಲಿಯೂ ಪತ್ರಿಕಾ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡುವಂತಾಗಲಿ ಎಂದು ಈ ಸಂದರ್ಭದಲ್ಲಿ ಶುಭ ಹಾರೈಸಲಾಯಿತು.

ಈ ಸಂದರ್ಭದಲ್ಲಿ ಇಂಡಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಶಾಂತ ಕಾಳೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಶಿವಯೋಗಪ್ಪ ಮಾಡ್ಯಾಳ, ಮಲ್ಲಿಕಾರ್ಜುನ ನಡುಗಡ್ಡಿ, ರಂಜಾನ್ ವಾಲಿಕಾರ, ರಾಜು ಪಡನೂರ, ಜಿಯಾ ಉಲ್ ಹಕ್ ಬೇನೂರ, ಸುನೀಲ ಯಂಟಮನ ಉಪಸ್ಥಿತರಿದ್ದರು.

ಪೂಲ್ ಕ್ಯಾಂಪಸ್ ಸಂದರ್ಶನ: 50ಕ್ಕೂ ಹೆಚ್ಚು ವಿದ್ಯಾರ್ಥಿಗಳ ಆಯ್ಕೆ

ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ನಲ್ಲಿ ನವೆಂಬರ್ 4 ಮತ್ತು 5 ರಂದು ಎರಡು ದಿನ ಸೆಂಟಮ್ ಎಲೆಕ್ಟ್ರಾನಿಕ್ಸ್ ನಡೆಸಿದ ಪೂಲ್ ಕ್ಯಾಂಪಸ್ ಸಂದರ್ಶನದಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಜಾಗತಿಕ ಮಟ್ಟದ ಪ್ರಮುಖ ಎಲೆಕ್ಟ್ರಾನಿಕ್ಸ್ ವಿನ್ಯಾಸ ಹಾಗೂ ಉತ್ಪಾದನೆ ಸಂಸ್ಥೆ 'ಸೆಂಟಮ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್' (Centum Electronics Pvt. Ltd.) ವತಿಯಿಂದ ಅಂತಿಮ ವರ್ಷದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ ಹಾಗೂ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಿಗಾಗಿ ಈ ಕ್ಯಾಂಪಸ್ ಸಂದರ್ಶನ ಆಯೋಜಿಸಿತ್ತು. ನಾನಾ ಪಾಲಿಟೆಕ್ನಿಕ್ ಕಾಲೇಜುಗಳಿಂದ ಒಟ್ಟು 120ಕ್ಕೂ ಹೆಚ್ಚು ವಿದ್ಯಾರ್ಥಿಗಗಳು ಪಾಲ್ಗೊಂಡಿದ್ದರು.

ಪ್ರಾಥಮಿಕ ಸುತ್ತಿನ ನಂತರ ಅರ್ಹತೆ ಪಡೆದ 90 ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆ ಹಾಗೂ ನೇರ ಸಂದರ್ಶನ ಪ್ರಕ್ರಿಯೆಗಳನ್ನು ನಡೆಸಲಾಯಿತು. ತಾಂತ್ರಿಕ ಮತ್ತು ಮೌಖಿಕ ಪರೀಕ್ಷೆಗಳಲ್ಲಿ ಅತ್ಯುತ್ತಮ ಪ್ರತಿಭೆ ತೋರಿದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಂತಿಮವಾಗಿ ಉದ್ಯೋಗಕ್ಕೆ ಆಯ್ಕೆಯಾಗಿದ್ದು, ಅವರಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಿ.ಎಲ್.ಡಿ.ಇ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಾಗಿರುವುದು ಗಮನಾರ್ಹವಾಗಿದೆ. ಆಯ್ಕೆಯದ ವಿದ್ಯಾರ್ಥಿಗಳಿಗೆ ಸ್ಥಳದಲ್ಲಿಯೇ ಅಧಿಕೃತ ನೇಮಕಾತಿ ಪತ್ರವನ್ನು (Offer Letter) ನೀಡಲಾಯಿತು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ವತಿಯಿಂದ ಸಹಾಯಕ ವ್ಯವಸ್ಥಾಪಕ ಎಚ್. ಆರ್. ಅಂಶಿತ, ಸಹಾಯಕ ವ್ಯವಸ್ಥಾಪಕ(ಕಾರ್ಯಾಚರಣೆ) ನರಸಿಂಹನ್ ಅವರು ನೇಮಕಾತಿ ನಡೆಸಿದರು.

ಈ ಸಂದರ್ಭದಲ್ಲಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಪ್ರಭುದೇವ ಬಿ. ಕಳಸಗೊಂಡ, ಉದ್ಯೋಗಾಧಿಕಾರಿ ಸುಧನ್ವ ವಿ. ಕುಲಕರ್ಣಿ, ಸಿಬ್ಬಂದಿಯಾದ ಶಿಲ್ಪಾ ಜಗದಾಳ , ಸಂತೋಷ ಹಿರೇಮಠ, ಪಾಂಡುರಂಗ ಅಸ್ಲಂಕರ, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಹಾಗೂ ಮೆಕ್ಯಾನಿಕಲ್ ವಿಭಾಗಗಳ ಮುಖ್ಯಸ್ಥರು, ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ ಉಪಸ್ಥಿತರಿದ್ದರು.

ಸ್ಥಳೀಯ ಮತ್ತು ಗ್ರಾಮೀಣ ಭಾಗದ ತಾಂತ್ರಿಕ ವಿದ್ಯಾರ್ಥಿಗಳಿಗೆ ಖ್ಯಾತ ಕೈಗಾರಿಕೆ ಸಂಸ್ಥೆಯಲ್ಲಿ ಉನ್ನತ ಉದ್ಯೋಗಾವಕಾಶ ಪಡೆಯಲು ಯಶಸ್ವಿಯಾದ ಎಲ್ಲ ವಿದ್ಯಾರ್ಥಿಗಳಿಗೆ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ ಶಾಸಕ ಸುನೀಲಗೌಡ ಬ. ಪಾಟೀಲರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು ಸಂತಸ ವ್ಯಕ್ತಪಡಿಸಿದ್ದು, ಅಭಿನಂದನೆ ಸಲ್ಲಿಸಿದ್ದಾರೆ.

ಪಿಂಚಣಿ ಸೇರಿದಂತೆ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಆಗ್ರಹ । ಕನಕಪುರದಿಂದ ಬೆಂಗಳೂರಿಗೆ ಪಾದಯಾತ್ರೆ । ನ.16ರಂದು ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ । ನ.17ರಿಂದ ಜಿಲ್ಲಾವಾರು ಅನಿರ್ದಿಷ್ಟಾವಧಿ ಹೋರಾಟಕ್ಕೆ ನಿರ್ಧಾರ

ನ.14ರಿಂದ ಅನುದಾನಿತ ನೌಕರರ ರಾಜ್ಯವ್ಯಾಪಿ ಹೋರಾಟ

ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: ಕರ್ನಾಟಕ ರಾಜ್ಯದ ಅನುದಾನಿತ ಶಾಲಾ–ಕಾಲೇಜುಗಳ ನೌಕರರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ, ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಲು ಅನುದಾನಿತ ಶಾಲಾ–ಕಾಲೇಜುಗಳ ನೌಕರರ ವಿವಿಧ ಸಂಘಟನೆಗಳ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿದೆ.

ಇಂದು ಬೆಂಗಳೂರಿನ ಹೊಂಬೇಗೌಡ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಹಂತ ಹಂತವಾಗಿ ಹೋರಾಟ ತೀವ್ರಗೊಳಿಸಲು ತೀರ್ಮಾನಿಸಲಾಯಿತು.

ಹೋರಾಟದ ರೂಪುರೇಷೆಗಳು:

ನವೆಂಬರ್ 14, 2026: ಮಕ್ಕಳ ದಿನಾಚರಣೆಯಂದು ಲಕ್ಷಾಂತರ ಮಕ್ಕಳಿಗೆ ವಿದ್ಯಾದಾನ ಮಾಡಿದ ಅನುದಾನಿತ ನೌಕರರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಆಗ್ರಹಿಸಿ, ಗೌರವಾನ್ವಿತ ಮುಖ್ಯಮಂತ್ರಿಗಳ ತವರು ಕ್ಷೇತ್ರವಾದ ಕನಕಪುರದಿಂದ ಬೆಂಗಳೂರಿನವರೆಗೆ ಪಿಂಚಣಿ ಪಾದಯಾತ್ರೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ನವೆಂಬರ್ 16, 2026: ರಾಜ್ಯಾದ್ಯಂತ ಎಲ್ಲಾ ಅನುದಾನಿತ ಶಾಲಾ–ಕಾಲೇಜುಗಳನ್ನು ಬಂದ್ ಮಾಡಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿದೆ.

ನವೆಂಬರ್ 17, 2026ರಿಂದ: ಸರ್ಕಾರ ನಮ್ಮ ಹೋರಾಟಕ್ಕೆ ಸೂಕ್ತವಾಗಿ ಸ್ಪಂದಿಸದಿದ್ದಲ್ಲಿ, ಬೇಡಿಕೆಗಳ ಈಡೇರಿಕೆಯ ಅಧಿಕೃತ ಆದೇಶ ಹೊರಬೀಳುವವರೆಗೆ ಜಿಲ್ಲಾವಾರು ಅನಿರ್ದಿಷ್ಟಾವಧಿ 'ಮಾಡು ಇಲ್ಲವೇ ಮಡಿ' ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ಅನುದಾನಿತ ನೌಕರರ ಪ್ರಮುಖ ನ್ಯಾಯಯುತ ಬೇಡಿಕೆಗಳು:

ದಿನಾಂಕ 24–07–2026ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ ನೀಡಿರುವ ಆದೇಶದಂತೆ, ಅನುದಾನಿತ ಶಾಲಾ–ಕಾಲೇಜುಗಳ ನೌಕರರ ಅನುದಾನರಹಿತ ಅವಧಿಯ ಸೇವೆಯನ್ನು ಯಾವುದೇ ವೇತನ ಹಿಂಬಾಕಿ ನೀಡದೆ, ಕೇವಲ ವೇತನ ನಿಗದಿ ಹಾಗೂ ಪಿಂಚಣಿ ಸೌಲಭ್ಯಗಳಿಗಾಗಿ ಪರಿಗಣಿಸುವಂತೆ ಸರ್ಕಾರ ಕೂಡಲೇ ಆದೇಶ ಹೊರಡಿಸಬೇಕು.

ಸರ್ಕಾರ ತನ್ನ ಚುನಾವಣಾ ಪೂರ್ವ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ರಾಷ್ಟ್ರೀಯ ಪಿಂಚಣಿ ಯೋಜನೆ (ಓಕಖ) ರದ್ದುಗೊಳಿಸಿ, ಹಳೆಯ ಪಿಂಚಣಿ ಯೋಜನೆ (ಔಕಖ)ಯನ್ನು ಅನುದಾನಿತ ಶಾಲಾ–ಕಾಲೇಜುಗಳ ನೌಕರರಿಗೂ ಜಾರಿಗೊಳಿಸಬೇಕು.

ಸರ್ಕಾರಿ ನೌಕರರಿಗೆ ನೀಡುತ್ತಿರುವ ಆರೋಗ್ಯ ಸಂಜೀವಿನಿ ಯೋಜನೆಯನ್ನು ಅನುದಾನಿತ ಶಾಲಾ–ಕಾಲೇಜುಗಳ ನೌಕರರಿಗೂ ವಿಸ್ತರಿಸಬೇಕು.

ಸೇವಾ ಭದ್ರತೆ ಹಾಗೂ ಆರ್ಥಿಕ ಸೌಲಭ್ಯಗಳ ವಿಷಯದಲ್ಲಿ ಸರ್ಕಾರಿ ಮತ್ತು ಅನುದಾನಿತ ನೌಕರರ ನಡುವೆ ಯಾವುದೇ ರೀತಿಯ ತಾರತಮ್ಯ ಮಾಡಬಾರದು.

ನೌಕರರ ಒಗ್ಗಟ್ಟಿಗೆ ರಾಜ್ಯಾಧ್ಯಕ್ಷರ ಕರೆ

ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿರುವ ಅನುದಾನಿತ ಶಾಲಾ–ಕಾಲೇಜುಗಳ ನೌಕರರು ಇಂದು ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟದ ಹಾದಿ ಹಿಡಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ನಮ್ಮ ಬೇಡಿಕೆಗಳನ್ನು ಇನ್ನು ವಿಳಂಬ ಮಾಡದೆ ಮಾನವೀಯ ನೆಲೆಯಲ್ಲಿ ಪರಿಗಣಿಸಿ, ನ್ಯಾಯ ಒದಗಿಸಬೇಕು.

ರಾಜ್ಯದ ಅನುದಾನಿತ ಪ್ರಾಥಮಿಕ ಶಾಲೆಗಳಿಂದ ಪದವಿ ಕಾಲೇಜುಗಳವರೆಗೆ ಕಾರ್ಯನಿರ್ವಹಿಸುತ್ತಿರುವ ಸಮಸ್ತ ನೌಕರರು, ಶಿಕ್ಷಕರು ಹಾಗೂ ಎಲ್ಲಾ ಸಂಘಟನೆಗಳ ಪದಾಧಿಕಾರಿಗಳು ಪಕ್ಷ, ಸಂಘಟನೆಗಳ ಭೇದಭಾವ ಮರೆತು ಒಂದಾಗಿ ಈ ಹೋರಾಟದಲ್ಲಿ ಭಾಗವಹಿಸಬೇಕು. ನಮ್ಮ ಹಕ್ಕುಗಳನ್ನು ಪಡೆಯಲು ಸಂಘಟಿತ ಹೋರಾಟವೇ ಅನಿವಾರ್ಯವಾಗಿದ್ದು, ಪ್ರತಿಯೊಬ್ಬ ನೌಕರರೂ ಹೋರಾಟಕ್ಕೆ ಸಜ್ಜಾಗಬೇಕು ಎಂದು ಕರ್ನಾಟಕ ರಾಜ್ಯ ಅನುದಾನಿತ ಶಾಲಾ–ಕಾಲೇಜುಗಳ ನೌಕರರ ಸಂಘಟನೆಗಳ ಪರವಾಗಿ ರಾಜ್ಯಾಧ್ಯಕ್ಷ ಜಿ. ಹನುಮಂತಪ್ಪ ಅವರು ಕರೆ ನೀಡಿದ್ದಾರೆ.

ಈ ವೇಳೆ ಹೆಚ್.ನಾಗರಾಜಪ್ಪ,ಪಿ. ಎಸ್.ಕೊಕಟನೂರ, ಶಿವಾನಂದ ಸ್ವಾಮಿ, ಕೃಷ್ಣಮೂರ್ತಿ ,ಮುತ್ತುರಾಜ ಮತ್ತಿಕೊಪ್ಪ,ರಾಮು ಗುಗವಾಡ,ರಾಜಗೋಪಾಲ ಎನ್.ವೆಂಕಟಾಚಲ ಸಿ.ಎಸ್.ಎಮ್.ಕೆ.ರಾಜು,ಪ್ರೇಮಾ ಎಸ್.ಲಕ್ಷ್ಮೀಪುತ್ರ ಕಿರನಳ್ಳಿ, ಉಮೇಶ ಬಿ.ಎಸ್.ಮುಂತಾದವರು ಉಪಸ್ಥಿತರಿದ್ದರು

ರೈತರ ಸಾಲಮನ್ನಾ & ಉಚಿತ ಮೇವು ಒದಗಿಸಲು ಮನವಿ



ಉದಯರಶ್ಮಿ ದಿನಪತ್ರಿಕೆ

ಕಬ್ಬಿಗೆ ರಾಜ್ಯ ಸರ್ಕಾರ ರೂ. 1,000, ಕೇಂದ್ರ ಸರ್ಕಾರ ರೂ. 1,000 ಹಾಗೂ ಸಕ್ಕರೆ ಕಾರ್ಖಾನೆಗಳು ರೂ. 4,000 ದರ ಘೋಷಿಸಲಿ: ಮೋತಿರಾಮ ಚವ್ಹಾಣ ಆಗ್ರಹ

ವಿಜಯಪುರ: ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ ಪ್ರತಿ ಟನ್ ಕಬ್ಬಿಗೆ ರೂ. 1,000, ಕೇಂದ್ರ ಸರ್ಕಾರ ರೂ. 1,000 ಹಾಗೂ ಸಕ್ಕರೆ ಕಾರ್ಖಾನೆಗಳು ರೂ. 4,000 ಸೇರಿ ಒಟ್ಟು ರೂ. 6,000 ದರ ಘೋಷಿಸಿ ರೈತರಿಗೆ ನ್ಯಾಯ ಒದಗಿಸಬೇಕು ಎಂದು ಜೈ ಜವಾನ್ ಜೈ ಕಿಸಾನ್ ಜೈ ಭಾರತೀಯ ಸಂಘಟನೆ ಕರ್ನಾಟಕ ರಾಜ್ಯಾಧ್ಯಕ್ಷ ಶ್ರೀ ಮೋತಿರಾಮ ಚವ್ಹಾಣ ಆಗ್ರಹಿಸಿದ್ದಾರೆ.

ಈ ಕುರಿತು ವಿಜಯಪುರ ಜಿಲ್ಲಾಧಿಕಾರಿಗಳಿಗೆ ಸಂಘಟನೆಯ ವತಿಯಿಂದ ಮನವಿ ಸಲ್ಲಿಸಿ, ರೈತರ ವಿವಿಧ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವಂತೆ ಒತ್ತಾಯಿಸಲಾಗಿದೆ.

ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ರೈತರ ಜಾನುವಾರುಗಳಿಗೆ ಸರ್ಕಾರದಿಂದಲೇ ಉಚಿತ ಮೇವು ಒದಗಿಸಬೇಕು. ದ್ರಾಕ್ಷಿ ಬೆಳೆಗಾರರಿಗೆ ಬೆಳೆ ವಿಮೆ ಸೌಲಭ್ಯ ಕಲ್ಪಿಸಬೇಕು. ಈಗಾಗಲೇ ವಿಮೆ ಪರಿಹಾರದ ಅರ್ಧದಷ್ಟು ಮಾತ್ರ ದೊರೆತಿದ್ದು, ಬಾಕಿ ಉಳಿದಿರುವ ಅರ್ಧದಷ್ಟು ಪರಿಹಾರವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ನಮ್ಮ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ ಸಂಘಟನೆಯ ವತಿಯಿಂದ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಮೋತಿರಾಮ ಚವ್ಹಾಣ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಹುಸೇನಸಾಬ ಮುಲ್ಲಾ, ಕುಲದೀಪ ಸಿಂಗ್ ಪೋತಿವಾಲ, ಪಾರ್ವತಿ ಕಟ್ಟಿಮನಿ, ಮಾಲನಬಿ ಶೇಖ್, ಅನುಭಾಯಿ ರಾಠೋಡ ಸೇರಿದಂತೆ ಹಲವರಿದ್ದರು.

ಸುಪ್ರೀಂ ಕೋರ್ಟ ನಿರ್ದೇಶನ । ಆಲಮಟ್ಟಿಯಲ್ಲಿ ಜಿಲ್ಲಾಧಿಕಾರಿ ಕೆ. ಆನಂದ್ ಹೇಳಿಕೆ

ಅರಣ್ಯ ಭೂಮಿ ಆಕ್ರಮ ಮಂಜೂರಾತಿ ತನಿಖೆಗೆ ಎಸ್‌ಐಟಿ ರಚನೆ

ಉದಯರಶ್ಮಿ ದಿನಪತ್ರಿಕೆ



ಆಲಮಟ್ಟಿ: ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಅರಣ್ಯ ಭೂಮಿ ಒತ್ತುವರಿ ಹಾಗೂ ನಿಯಮಬಾಹಿರ ಭೂಮಂಜೂರಾತಿ ಪ್ರಕರಣಗಳ ತನಿಖೆಗೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ. ಆನಂದ್ ತಿಳಿಸಿದರು.

ಆಲಮಟ್ಟಿ ಜಲಾಶಯದ ಕೃಷ್ಣಾ ನದಿ ತೀರದ ಜಾಕ್‌ವೆಲ್‌ಗೆ ಬುಧವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 1980ರ ಅರಣ್ಯ ಸಂರಕ್ಷಣಾ ಕಾಯ್ದೆಗೂ ಮುನ್ನ ಮತ್ತು ನಂತರ ಅರಣ್ಯ ಭೂಮಿಯಲ್ಲಿ ವಿವಿಧ ಉದ್ದೇಶಗಳಿಗೆ ಮಂಜೂರಾದ ಜಮೀನುಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ನಿಯಮಬಾಹಿರ ಮಂಜೂರಾತಿ, ಅಧಿಕಾರ ವ್ಯಾಪ್ತಿ ಮೀರಿ ಭೂಮಿ ನೀಡಿರುವುದು ಸೇರಿದಂತೆ ಎಲ್ಲ ಅಂಶಗಳನ್ನು ಎಸ್‌ಐಟಿ ಪರಿಶೀಲಿಸಲಿದೆ. ತಮ್ಮ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ತಂಡದಲ್ಲಿ ಸಿಇಒ, ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸದಸ್ಯರಾಗಿದ್ದಾರೆ ಎಂದರು.

ಅಗತ್ಯ ಅನುಮತಿ ಪಡೆದಿರುವ ಕುರಿತು ಪರಿಶೀಲಿಸಿ, ಸಮಗ್ರ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಬಸವನ ಬಾಗೇವಾಡಿ ನಗರ ಸ್ಥಳೀಯ ಸಂಸ್ಥೆಯ ಅಮೃತ್ 2.0 ಯೋಜನೆಯಡಿ 34 ಕಿ.ಮೀ. ಉದ್ದದ ಪೈಪ್‌ಲೈನ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಬಹುತೇಕ ಪೂರ್ಣಗೊಂಡಿದೆ. ಅರಣ್ಯ ಪ್ರದೇಶದಲ್ಲಿ ಹಾದುಹೋಗುವ 8 ಕಿ.ಮೀ. ಪೈಪ್‌ಲೈನ್‌ಗೆ ಕೇಂದ್ರ ಸರ್ಕಾರದ ಪರಿವೇಶ ಪೋರ್ಟಲ್ ಮೂಲಕ ಅನುಮತಿ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಜಲಧಾರೆ ಯೋಜನೆಯ ಅರಣ್ಯ ಅನುಮತಿಯೂ ಪ್ರಗತಿಯಲ್ಲಿದೆ ಎಂದರು.

ಅರಣ್ಯ, ಕೆಬಿಜೆಎನ್‌ಎಲ್ ಹಾಗೂ ಕಂದಾಯ ಭೂಮಿಗಳ ನಡುವಿನ ಗೊಂದಲ ನಿವಾರಣೆಗೆ ಶೀಘ್ರದಲ್ಲೇ ಮೂರು ಇಲಾಖೆಗಳ ಸಭೆ ಕರೆಯಲಾಗುವುದು ಎಂದು ಹೇಳಿದರು.

ವಿಜಯಪುರ ಅಸಿಸ್ಟೆಂಟ್ ಕಮಿಷನರ್ ಜುಪಿಶಾನ್ ಹಕ್ಕ. ಸ ಆರ್ ಡಬ್ಲು ಎಸ್ ಎಡಬ್ಲಿ ವರ್ಧಮಾನ ಗೊಂಗಡಿ . ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ . ಮಲ್ಲಿನಾಥ್ ಬಿ ಕುಸನಾಳ. ಆರ್ ಎಫ ಒ ಬಸನಗೌಡ ಬಿರಾದಾರ, ಕರ್ನಾಟಕ ಜಲ ಮಂಡಳಿ ವಿಜಯಪುರ ಜಿಲ್ಲಾ ಕಾರ್ಯಪಾಲಕ ಅಭಿಯಂತರರು ರಾಮರಾವ್ ರಾಠೋಡ್, ಎಡಬ್ಲಿ, ಬಸವರಾಜ ಬಾಗಲಕೋಟೆ , ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಬಿ ಎ, ಸೌವದಾಗರ , ಕಾರ್ಯಪಾಲಕ ಅಭಿಯಂತರರು, ವಿಠ್ಠಲ್ ಮಾಶ್ಯಾಳ , ಎಡಬ್ಲಿ ವಿಲಾಸ ರಾಠೋಡ್, ಪುರಸಭೆ ಮುಖ್ಯಾಧಿಕಾರಿ ಶಬ್ಬೀರ್ ರೇವರಕರ್ , ಕಿರಿಯ ಅಭಿಯಂತರ ಮಾದೇವ ಜಂಬಗಿ, ಇದ್ದರು .

ಇಂದು ಮಹಿಳಾ ವಿವಿಯಲ್ಲಿ ದೂರದರ್ಶನ ನಿರೂಪಣೆ ಕಾರ್ಯಾಗಾರ

ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಸ್ನಾತಕ ವಿದ್ಯಾರ್ಥಿನಿಯರಿಗಾಗಿ ನ. 6ರಂದು ಬೆಳಿಗ್ಗೆ 10.30ಕ್ಕೆ ಪತ್ರಿಕೋದ್ಯಮ ವಿಭಾಗದ ಸಭಾಂಗಣದಲ್ಲಿ ಒಂದು ದಿನದ 'ದೂರದರ್ಶನ ನಿರೂಪಣೆ' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಸ್ನಾತಕ ವಿಭಾಗದ ವಿಶೇಷ ಅಧಿಕಾರಿ ಪ್ರೊ. ಡಿ.ಎಂ. ಮದರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರೊ. ಓಂಕಾರ ಕಾಕಡೆ ಅಧ್ಯಕ್ಷತೆ ವಹಿಸಲಿದ್ದು. ಸಂಪನ್ಮೂಲ ವ್ಯಕ್ತಿಗಳಾಗಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಂದೀಪ್ ಭಾಗವಹಿಸಲಿದ್ದಾರೆ.

ಕಾರ್ಯಗಾರದಲ್ಲಿ ಸ್ನಾತಕ ವಿಭಾಗದ ಸಮಾಜ ವಿಜ್ಞಾನ ಕೋರ್ಸ್ಗಳ ಸಂಯೋಜಕ ಡಾ. ಕಿರಣ್ ಜಿ.ಎನ್, ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು, ಬೋದಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿರಲಿದ್ದಾರೆ ಎಂದು ಕಾರ್ಯಾಗಾರದ ಸಂಯೋಜಕಿ ಡಾ. ತಹಮೀನಾ ನಿಗಾರ ಸುಲ್ತಾನಾ ಮಹಿಳಾ ವಿವಿಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧಕರು ಸಮಾಜ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ

ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ತಾಲೂಕಿನ ಮಿಣಜಗಿ ಗ್ರಾಮದ ಶ್ರೀ ಗುರುಪಾದೇಶ್ವರರ 58ನೇ ಪುಣ್ಯಸ್ಮರಣೆ ಹಾಗೂ ಮಹಾ ರಥೋತ್ಸವ ಅಂಗವಾಗಿ ಶ್ರೀಮಠದಿಂದ ಕೊಡಮಾಡಲಾಗುವ ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಎಂಟು ಜನರು ಭಾಜನರಾಗಿದ್ದಾರೆ.

ಬೆಂಗಳೂರಿನ ಚಲನಚಿತ್ರ ನಟ ಅನಿರುದ್ದ ಜತಕರ, ತಾಳಿಕೋಟೆಯ ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ. ವಿರೇಶಗೌಡ ಪಾಟೀಲ(ಮಿಣಜಗಿ), ಮಾಣಿಕಚಂದ ದಂಡಾವತಿ(ಮುದ್ದೇಬಿಹಾಳ), ನಾಗರಬೆಟ್ಟ ಎಕ್ಸಲೆಂಟ್ ಸೈನ್ಸ್ ಕಾಲೇಜಿನ ಅಧ್ಯಕ್ಷ ಬಿ.ಜಿ.ಮಠ, ಅರ್ಬನ್ ಬ್ಯಾಂಕ್ ನಿರ್ದೇಶಕ ಡಿ.ಕೆ.ಪಾಟೀಲ, ಆರೋಗ್ಯ ಇಲಾಖೆಯ ವಿರೇಶ ದಿಂಡವಾರ, ಮುದ್ದೇಬಿಹಾಳ ಪುರಸಭೆ ಮಾಜಿ ಸದಸ್ಯ ಬಸಯ್ಯ ನಂದಿಕೇಶ್ವರಮಠ, ಅವರು ರಾಜ್ಯಮಟ್ಟದ ಪ್ರಶಸ್ತಿಗೆ ಆಯ್ಕೆಗೊಂಡಿದ್ದಾರೆ.

ಸಮಾಜ ಸೇವೆ, ಪತ್ರಿಕೋದ್ಯಮ, ಕಲೆ, ಶಿಕ್ಷಣ, ಸಹಕಾರ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿರುವ ಸಾಧಕರನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ದಿ. 7 ರಂದು ಬೆಳಿಗ್ಗೆ 11 ಗಂಟೆಗೆ ಮಿಣಜಗಿ ಗ್ರಾಮದ ಶ್ರೀ ಗುರುಪಾದೇಶ್ವರರ 58ನೇ ಪುಣ್ಯಸ್ಮರಣೆ ಹಾಗೂ ಮಹಾ ರಥೋತ್ಸವ ಅಂಗವಾಗಿ ಶ್ರೀಮಠದಲ್ಲಿ ನಡೆಯಲಿರುವ ಧರ್ಮ ಸಭೆ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ ಎಂದು ಶ್ರೀಮಠದ ವೇ.ಸೋಮಶೇಖರಯ್ಯ ಹಿರೇಮಠ ಅವರು ತಿಳಿಸಿದ್ದಾರೆ.



Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR